ಕರ್ನಾಟಕ ಸರ್ಕಾರ

## ಕರ್ನಾಟಕ ಕೃಷಿ ಬೆಲೆ ಆಯೋಗ


**(Karnataka Agriculture Price Commission)**

# ರಾಜ್ಯದ ರೈತರ ಉತ್ಪನ್ನಗಳಿಗೆ ಖಾತರಿ ಬೆಲೆ ಮತ್ತು ಸದೃಢ ಮಾರುಕಟ್ಟೆ

## 2017-18 ನೇ ಸಾಲಿನ ಉತ್ಪಾದನಾ ವೆಚ್ಚ ಹಾಗು ವಾಸ್ತವ ಸ್ಥಿತಿ ವರದಿ

## ಮತ್ತು

## ಬಹು-ಮುಖಿ ಶಿಫಾರಸ್ಸುಗಳು




**ಡಿಸೆಂಬರ್ 2018**


**ಕೃಷಿ ಆಯುಕ್ತರ ಕಾರ್ಯಾಲಯ ಆವರಣ**

**ಶೇಷಾದ್ರಿ ರಸ್ತೆ, ಬೆಂಗಳೂರು – 560 001**

# ಕರ್ನಾಟಕ ಕೃಷಿ ಬೆಲೆ ಆಯೋಗದ ರಚನೆ

| | | |
|---|---|---|
| 1. | **ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ** | **ಅಧ್ಯಕ್ಷರು** |
| 2. | ಶ್ರೀ. ಸಂಪತ್ ಸಾಮ್ರಾಜ್ಯ, ರೈತ ಪ್ರತಿನಿಧಿ | ಸದಸ್ಯರು |
| 3. | ಶ್ರೀ. ಎಂ.ಮಹೇಶ್ವರ್ ರಾವ್, ಭಾ.ಆ.ಸೇ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸದಸ್ಯರು |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 5. | ಶ್ರೀ. ಜಗದೀಶ್ ಕೆ.ಜಿ. ಭಾ.ಅ.ಸೇ, ಕೃಷಿ ಆಯುಕ್ತರು, ಕೃಷಿ ಇಲಾಖೆ | ಖಾಯಂ ಆಹ್ವಾನಿತರು |
| 6. | ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಖಾಯಂ ಆಹ್ವಾನಿತರು |
| 7. | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಖಾಯಂ ಆಹ್ವಾನಿತರು |
| 8. | ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ | ಖಾಯಂ ಆಹ್ವಾನಿತರು |
| 9. | ಶ್ರೀ. ಬಿ.ವೈ. ಶ್ರೀನಿವಾಸ್, ಕೃಷಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 10. | ಡಾ. ಎನ್. ವಿ. ಕಮಲ, ಉಪ ಕೃಷಿ ನಿರ್ದೇಶಕರು | ತಾಂತ್ರಿಕ ಅಧಿಕಾರಿಗಳು |
| 11. | ಶ್ರೀಮತಿ. ಬಿ.ವಿ. ಸುಮ, ಕೃಷಿ ಅಧಿಕಾರಿ | ತಾಂತ್ರಿಕ ಅಧಿಕಾರಿಗಳು |

## ಕಾರ್ಯ ತಂಡ

**ತಾಂತ್ರಿಕ ಸಲಹೆಗಾರರು**

ಡಾ. ಕೆ. ಜೆ. ಪರಮೇಶ್ವರಪ್ಪ

**ತಾಂತ್ರಿಕ ಸಹಾಯಕರು**

ಶ್ರೀಮತಿ. ವಾಣಿ ಎನ್
ಕುಮಾರಿ ನಿಶಿತಾ ಕೆ
ಕುಮಾರಿ ಭವ್ಯಶ್ರೀ ಎಸ್
ಶ್ರೀಮತಿ. ಜಯಶ್ರೀ ನಾರಾಯಣಪುರ
ಶ್ರೀಮತಿ. ಉಷಾ ವಿ
ಶ್ರೀ. ಅರುಣ್ ಪ್ರಸಾದ್

**ಹೆಚ್ಚುವರಿ ತಾಂತ್ರಿಕ ಸಲಹೆಗಾರರು**

ಶ್ರೀ. ನಿರಂಜನ್ ಐತಾಳ್

**ಸಹಾಯಕರು**

ಶ್ರೀ. ಅಭಿನಂದನ್ ಟಿ.ಜಿ (ಪ್ರ.ದ.ಸ)
ಶ್ರೀ. ಬಿ.ಸಿ. ಪ್ರಸಾದ್ (ಬೆ.ಗಾ.)
ಶ್ರೀ. ಸುಮಂತ್ ಎ ಮತ್ತು ಶ್ರೀ. ಸಂದೀಪ ಆರ್ (ಸಹಾಯಕರು)
ಶ್ರೀ. ಎನ್.ಎಸ್. ಶ್ರೀಕಾಂತ್ (ವಾಹನ ಚಾಲಕರು)
ಶ್ರೀ. ಡಿ.ಜಿ. ಶಂಕರ್ ('ಡಿ' ಗ್ರೂಪ್ ನೌಕರರು)

### ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕಗಳು

**ಕೃ.ವಿ.ವಿ. ಬೆಂಗಳೂರು**: ಡಾ. ಸಿ.ಪಿ. ಗ್ರೇಸಿ, (ಪ್ರಧಾನ ಸಂಶೋಧಕರು), ಕು. ಪ್ರಿಯಾಂಕ ಕೆ.ಟಿ & ಶ್ರೀ. ಶ್ರೀಕಾಂತ್ ಎಮ್.ಬಿ (ಸಂಶೋಧನಾ ಸಹವರ್ತಿಗಳು)

**ಕೃ.ವಿ.ವಿ. ಧಾರವಾಡ**: ಡಾ. ವಿಲಾಸ ಕುಲಕರ್ಣಿ, (ಪ್ರಧಾನ ಸಂಶೋಧಕರು), ಡಾ.ಕುಸುಮಾ ಡಿ.ಕೆ & ಶ್ರೀ. ಭೀಮನಗೌಡ ಒ ಪಾಟೀಲ್ (ಸಂಶೋಧನಾ ಸಹವರ್ತಿಗಳು)

**ಕೃ.ವಿ.ವಿ. ರಾಯಚೂರು**: ಡಾ. ಅಮೃತಾ ಟಿ. ಜೋಷಿ, (ಪ್ರಧಾನ ಸಂಶೋಧಕರು), ಶ್ರೀ. ಹರ್ಷನ್ ಹೆಚ್.ಎಸ್ & ಶ್ರೀ. ಮಂಜುನಾಥ ದೊಡ್ಡಮನಿ (ಸಂಶೋಧನಾ ಸಹವರ್ತಿಗಳು)

**ತೋ.ವಿ.ವಿ. ಬಾಗಲಕೋಟೆ**: ಡಾ. ಎಮ್.ಜಿ. ಕೆರುಟಗಿ, (ಪ್ರಧಾನ ಸಂಶೋಧಕರು), ಕು. ಪವಿತ್ರ ಎ.ಎಸ್ & ಕು. ಶ್ವೇತಾ ಬ್ಯಾಹಟ್ಟಿ (ಸಂಶೋಧನಾ ಸಹವರ್ತಿಗಳು)

**ಕೃ. & ತೋ.ವಿ.ವಿ. ಶಿವಮೊಗ್ಗ**: ಶ್ರೀ.ವೈ.ಎಸ್. ರಮೇಶ್, (ಪ್ರಧಾನ ಸಂಶೋಧಕರು), ಡಾ. ಸವಿತ ಎಸ್ & ಶ್ರೀ. ಸಂತೋಷ ಎನ್.ಎ (ಸಂಶೋಧನಾ ಸಹವರ್ತಿಗಳು)

Design by dataworx: Phone: +91 9480766666 / 9886004567; website: www.dataworx.co.in

# ಮುನ್ನುಡಿ

ಕರ್ನಾಟಕ ಕೃಷಿ ಬೆಲೆ ಆಯೋಗ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ ಎಲ್ಲಾ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ***ಉತ್ಪಾದನಾ ವೆಚ್ಚವನ್ನು ರೈತರ ಸಹಯೋಗದಲ್ಲೇ ಅತ್ಯಂತ ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕಿ*** ಕಂಡುಹಿಡಿದು ರಾಜ್ಯ ಸರ್ಕಾರ ಸೂಕ್ತ ರೀತಿಯಲ್ಲಿ ಬೆಂಬಲ ಬೆಲೆ ನೀತಿಯ ಅನುಷ್ಠಾನ ಮತ್ತು ಖರೀದಿ ಕೈಗೊಳ್ಳಲು ಅನುವು ಮಾಡಿಕೊಟ್ಟಿರುತ್ತದೆ. ಈ ಕಾರ್ಯವನ್ನು ಈ ಸಾಲಿನಿಂದ **"ಅಮಯ ಕೃಷಿ"**ಎಂಬ ತಂತ್ರಾಂಶ ಸಿದ್ಧಪಡಿಸಿ ಸಂಪೂರ್ಣ **'ಆನ್‌ಲೈನ್'** ಮೂಲಕ ಕೈಗೊಳ್ಳಲಾಗಿರುತ್ತದೆ.

ವಿವಿಧ ಬೆಳೆಗಳ ಮಾರುಕಟ್ಟೆ, ಆವಕ, ಧಾರಣೆ ವರ್ತನೆಗಳ ವಿಶ್ಲೇಷಣೆಗಳನ್ನು ಕೈಗೊಂಡು ಮುಂದಿನ ದಿನಗಳ **ಬೆಲೆ ಮುನ್ನಂದಾಜು** (Price Forecasting) ನಡೆಸಿ, ಈ ಎಲ್ಲಾ ಮಾಹಿತಿಗಳು ಸದಾ ಶೀಘ್ರ ಪಡೆಯುವಂತಹ **"ಕೃಪ"** (ಕೃಷಿ ಧಾರಣೆ ವಿಶ್ಲೇಷಣೆ ಫಲಕ) ಎಂಬ **ಡ್ಯಾಶ್ ಬೋರ್ಡ್** (Dash Board) ವ್ಯವಸ್ಥೆಯನ್ನು ಸಿದ್ಧಪಡಿಸಿ ಸರ್ಕಾರದ ಇಲಾಖೆಗಳಿಗೆ ಹಾಗೂ ವಿಶ್ವವಿದ್ಯಾನಿಲಯಗಳಿಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಈ ಎಲ್ಲವುಗಳ ಸಮರ್ಪಕ ಬಳಕೆ ಮಾಡಿಕೊಂಡು 2018ನೇ ಸಾಲಿನ ರಾಜ್ಯದ ಪ್ರಮುಖ 26 ಬೆಳೆಗಳ ಉತ್ಪಾದನಾ ವೆಚ್ಚ, ಬೆಲೆ, ಮಾರುಕಟ್ಟೆಗೆ ಸಂಬಂಧಿಸಿದ ಈ **ವಸ್ತು ಸ್ಥಿತಿ ವರದಿ** ತಯಾರಿಸಲಾಗಿದೆ. ಈ 26 ಬೆಳೆಗಳು ಕರ್ನಾಟಕದ ಒಟ್ಟು ಕೃಷಿ ಭೂಮಿಯಲ್ಲಿ ಶೇ.87 ಭೂ ವಿಸ್ತೀರ್ಣವನ್ನು ಒಳಗೊಂಡಿದ್ದು ರಾಜ್ಯದ ಬಹುಪಾಲು ರೈತರ ಆರ್ಥಿಕ ಭದ್ರತೆಯ ಮೇಲೆ ಬೆಳಕು ಚೆಲ್ಲುತ್ತವೆ.

**ಕರ್ನಾಟಕ ಕೃಷಿ ಬೆಲೆ ಆಯೋಗದ ಈ ಕಾರ್ಯಕ್ರಮಗಳನ್ನು ಗಮನಿಸಿ, ಇದೇ ಮಾದರಿಯಲ್ಲಿ ದೇಶದಾದ್ಯಂತ ಮಾರಾಟ ಮಾಹಿತಿ (Market Intelligence) ವ್ಯವಸ್ಥೆ ರೂಪಿಸಲು ಬೆಲೆ ಆಯೋಗದ ಅಧ್ಯಕ್ಷರನ್ನೂ ಒಳಗೊಂಡಂತೆ ಕೇಂದ್ರ ಸರ್ಕಾರ ಒಂದು ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಿರುವುದು ಹೆಮ್ಮೆಯ ವಿಚಾರ.**

ಕೃಷಿ ಬೆಲೆ ಆಯೋಗದ ವರದಿಯನ್ನು ಆಧರಿಸಿ ಕಳೆದ ಸಾಲುಗಳಲ್ಲಿ ಹಲವಾರು ಉತ್ಪನ್ನಗಳನ್ನು ಅಧಿಕ ಪ್ರೋತ್ಸಾಹ ಧಾರಣೆಯಲ್ಲಿ ರೈತರಿಂದ ಖರೀದಿಸಲಾಗಿದೆ. 2017–18ನೇ ಸಾಲಿನಲ್ಲಿ ರಾಗಿಗೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನ ಸೇರಿ ಘೋಷಿಸಿರುವ ರೂ.2300/– ಕ್ವಿಂಟಾಲ್ ಒಂದರ ಖರೀದಿ ಬೆಲೆ **ಏಕದಳ ಧಾನ್ಯ ಒಂದಕ್ಕೆ ಸರ್ಕಾರ ನೀಡಿರುವ ಅತ್ಯಧಿಕ ಬೆಲೆಯಾಗಿರುತ್ತದೆ**. ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರ ಧಾರಣೆ ಸ್ಥಿರೀಕರಣಕ್ಕೆ ಈ ರೀತಿ ಸುಮಾರು 257 ಲಕ್ಷ ಕ್ವಿಂಟಾಲ್ ಪ್ರಮಾಣದಷ್ಟು 15 ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪನ್ನವನ್ನು ಸುಮಾರು 9 ಲಕ್ಷ ರೈತರಿಂದ ಖರೀದಿಸಿದ್ದು ***ಪ್ರತೀ ರೈತರ ಖಾತೆಗೆ ಈ ಮೂಲಕ ಸುಮಾರು 85 ಸಾವಿರ ರೂಪಾಯಿ ಹಣ ನೇರವಾಗಿ ವರ್ಗಾವಣೆಯಾಗಿರುತ್ತದೆ***. ಆದರೆ, ಈ ಖರೀದಿ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಬೇಕಾಗಿದೆ.

**ಉದಾಹರಣೆಗೆ, ಕಳೆದ ಸಾಲಿನಲ್ಲಿ ಹೆಸರು ಮತ್ತು ಉದ್ದಿನ ಒಟ್ಟು ಉತ್ಪಾದನೆಯಲ್ಲಿ ಸುಮಾರು ಶೇ.33 ರಷ್ಟು ಸರ್ಕಾರ ಖರೀದಿ ಕೈಗೊಳ್ಳುವ ಮೊದಲೇ ವಿಕ್ರಯವಾಗಿದ್ದರೆ, ಕಡಲೆ ಖರೀದಿ ಪ್ರಾರಂಭಿಸುವ ಮೊದಲು ಅರ್ಧದಷ್ಟು ಆವಕ ಆಗಲೇ ಮಾರುಕಟ್ಟೆಯಲ್ಲಿ ಮಾರಾಟವಾಗಿರುತ್ತದೆ. ಈ ರೀತಿ ಸಕಾಲದಲ್ಲಿ ಮುಂಚಿತವಾಗಿ ಸರ್ಕಾರ ಖರೀದಿ ಪ್ರಾರಂಭಿಸದಿದ್ದಲ್ಲಿ, ಮಾರುಕಟ್ಟೆಯಲ್ಲಿ ಆಗಲೇ ನಡೆದಿರುವ ವಿಕ್ರಯ ಮಧ್ಯವರ್ತಿಗಳ ಕುತಂತ್ರದಿಂದ ಮತ್ತೆ ತಿರುಗಿ ಸರ್ಕಾರ ಕೈಗೊಳ್ಳುವ ಖರೀದಿಗೆ ಬರುವ ಸಾಧ್ಯತೆಯಿರುತ್ತದೆ.**

ಸರ್ಕಾರ ಸಕಾಲದಲ್ಲಿ ಮಧ್ಯಪ್ರವೇಶ ಮಾಡಿ ದೊಡ್ಡ ಪ್ರಮಾಣದಲ್ಲಿ ಖರೀದಿಗೆ ಸಿದ್ಧವಾದರೆ ಖಾಸಗಿ ವ್ಯಾಪಾರಸ್ಥರು, ಮಧ್ಯವರ್ತಿಗಳು ಜಾಗೃತರಾಗಿ, ತಮ್ಮ ವ್ಯವಹಾರದ ಅಗತ್ಯಕ್ಕನುಗುಣವಾದ ಖರೀದಿಗೂ ಮುಂದಾಗುವುದು ಅನಿವಾರ್ಯವಾಗುತ್ತದೆ. ಈ ಮೂಲಕ ಒಂದು **ಸಕಾರಾತ್ಮಕ ಮಾರುಕಟ್ಟೆ ಮನೋಪ್ರವೃತ್ತಿ** (Market Sentiment) ಏರ್ಪಾಡಾಗಿ ಧಾರಣೆ ಸ್ಥಿರತೆಯಾಗುವ ಸಾಧ್ಯತೆಯಿರುತ್ತದೆ.

**ಈ ಹಿಂದೆ ರಾಗಿ, ಕೊಬ್ಬರಿ ಹಾಗೂ ಅಡಕೆಗೆ ಬೆಂಬಲ ಬೆಲೆ ಘೋಷಿಸಿ ಸರ್ಕಾರ ಖರೀದಿಗೆ ಗಟ್ಟಿ ನಿರ್ಧಾರ ಪ್ರಕಟಿಸಿದೊಡನೆ ಮಾರುಕಟ್ಟೆ ಮಧ್ಯವರ್ತಿಗಳು ಜಾಗೃತರಾಗಿ ಧಾರಣೆ ಏರಿಸಿರುವುದರಿಂದ ಸರ್ಕಾರ ಖರೀದಿ ಕೈಗೊಳ್ಳುವ ಅವಶ್ಯಕತೆಯೇ ಬಂದಿರುವುದಿಲ್ಲ. ಸರ್ಕಾರದ ಸಮರ್ಪಕ ಮಧ್ಯಪ್ರವೇಶದಿಂದ ಈ ರೀತಿ ಹಿತಕರ ಮಾರುಕಟ್ಟೆ ಮನೋಪ್ರವೃತ್ತಿ ಏರ್ಪಾಡಾಗುವುದನ್ನು ಸೂಕ್ತ ರೀತಿಯಲ್ಲಿ ಬಳಸುವಂತಾಗಬೇಕು.**

ಕೇಂದ್ರ ಸರ್ಕಾರ ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ಖಾತರಿಗೊಳಿಸಲು ಕೆಲವು ನೂತನ ಯೋಜನೆಗಳನ್ನು ರೂಪಿಸಿದ್ದು, ರಾಜ್ಯ ಸರ್ಕಾರ ಇವುಗಳ ಸಂಪೂರ್ಣ ಉಪಯೋಗ ಪಡೆಯುವ ನಿಟ್ಟಿನಲ್ಲಿ ಕಳೆದ ಜುಲೈನಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವೊಂದನ್ನು ಏರ್ಪಡಿಸಲಾಗಿರುತ್ತದೆ. ಈ ಯೋಜನೆಗಳಲ್ಲಿ ಒಂದಾದ **"ಬೆಲೆ ಕೊರತೆ ಪಾವತಿ ಯೋಜನೆ"** (Price Deficiency Payment Scheme) ಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ

ಹರಿಯಾಣ ಮತ್ತು ಮಧ್ಯಪ್ರದೇಶ ರಾಜ್ಯಗಳ ಹಿರಿಯ ಅಧಿಕಾರಿಗಳನ್ನು ಕಾರ್ಯಾಗಾರಕ್ಕೆ ಆಹ್ವಾನಿಸಿ ಅಲ್ಲಿನ ಅನುಭವದ ಆಧಾರದ ಮೇಲೆ ಕರ್ನಾಟಕದಲ್ಲಿ ಈರುಳ್ಳಿ ಬೆಳೆಗೆ ಈ ವಿನೂತನ ಯೋಜನೆಯನ್ನು ಈ ಸಾಲಿನಲ್ಲಿ ಜಾರಿಗೊಳಿಸುವಂತಾಗಿರುವುದು ಸಂತಸದ ವಿಚಾರ.

ಸ್ಪರ್ಧಾತ್ಮಕ ಮಾರುಕಟ್ಟೆ ವ್ಯವಸ್ಥೆ ಮತ್ತು ಸರ್ಕಾರದ ಮಧ್ಯಪ್ರವೇಶಗಳ ಜೊತೆಗೆ ರೈತರ ಚೌಕಾಸಿ ಶಕ್ತಿ ಹೆಚ್ಚಿಸಲು **ಗುಂಪು ಮಾರಾಟ ವ್ಯವಸ್ಥೆ**, ಬೆಲೆ ಮುನ್ಸೂಚನೆ ಇತ್ಯಾದಿ ಮಾರುಕಟ್ಟೆ ಜ್ಞಾನದ ಸಕಾಲಿಕ ಪೂರೈಕೆ ಅಗತ್ಯವಾಗಿದೆ. ಮುಖ್ಯವಾಗಿ ರಾಜ್ಯ/ದೇಶದ ಮಟ್ಟದಲ್ಲಿ ಅಗತ್ಯಕ್ಕನುಗುಣವಾದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ **ಸಮಗ್ರ ಉತ್ಪಾದನಾ ನೀತಿ** ತಂದು ಅದಕ್ಕೆ ಪೂರಕವಾಗಿ ಸೂಕ್ತ **ಬೆಳೆ ಯೋಜನೆ** (Crop Plan) ಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ರೂಪಿಸುವುದು ಅಗತ್ಯ. ಜೊತೆಗೆ ಬೆಳೆ ವಿಮೆಯನ್ನು ಆದಾಯ ವಿಮೆ ಮಟ್ಟಕ್ಕೆ ಮೇಲೆತ್ತುವುದು ಅತ್ಯಗತ್ಯ.

**ಅಂತಿಮವಾಗಿ ರೈತರ ಉತ್ಪನ್ನಗಳಿಗೆ ನ್ಯಾಯಯುತ ಧಾರಣೆ ದೊರಕಿಸುವ ನಿಟ್ಟಿನಲ್ಲಿ ಮಧ್ಯವರ್ತಿಗಳ ಪಟ್ಟಭದ್ರ ಹಿತಾಸಕ್ತಿಗೆ ಕಡಿವಾಣ ಹಾಕಿ ಬೆಂಬಲ ಬೆಲೆಯಲ್ಲಿ ವ್ಯವಹರಿಸುವಂತೆ ಮತ್ತು ಸರ್ಕಾರ ನಿರ್ದಿಷ್ಟ ಪ್ರಮಾಣದ ರೈತರ ಉತ್ಪನ್ನಗಳನ್ನು ಖರೀದಿಸುವಂತೆ ಮಾಡಲು ಶಾಸನ ರೂಪಿಸುವುದು ಅನಿವಾರ್ಯವಾಗಿದೆ. ಬೆಂಬಲ ಬೆಲೆಯಲ್ಲಿ ವಿವಿಧ ಮಂಡಿಗಳಲ್ಲಿ ಖರೀದಿ ಜರುಗುವಂತೆ ಮಾಡಲು ಕೇಂದ್ರದ ನೀತಿ (NITI) ಆಯೋಗ ಇತ್ತೀಚಿಗೆ "ಕನಿಷ್ಠ ಮೀಸಲು ಬೆಲೆ" (Minimum Reserve Price -MRP) ಪ್ರಸ್ತಾಪಿಸಿರುವುದು ಅತ್ಯಂತ ಸ್ವಾಗತಾರ್ಹ.**

ಈಗಿನ ಕನಿಷ್ಠ ಬೆಂಬಲ ಬೆಲೆ ಬದಲಾಗಿ **ಕನಿಷ್ಠ ಮೀಸಲು ಬೆಲೆ** (Minimum Reserve Price) ಜಾರಿಗೆ ತಂದು ಇದಕ್ಕಿಂತ ಕಡಿಮೆ ಧಾರಣೆಯನ್ನು ವರ್ತಕರು ಎ.ಪಿ.ಎಂ.ಸಿ ಮಂಡಿಗಳಲ್ಲಿ ಪ್ರಸ್ತಾಪಿಸದಂತೆ ಕಠಿಣಕ್ರಮ ಹಾಗೂ ಈಗಿನ **ಕನಿಷ್ಠ ವೆಚ್ಚ ಮತ್ತು ಬೆಲೆ ಆಯೋಗ** (CACP)ದ ಬದಲಿಗೆ ಸಂವಿಧಾನದ ಅನುಚ್ಛೇದ 323B ದೊಳಗೆ ಅವಕಾಶವಿರುವಂತೆ ಒಂದು **'ಕೃಷಿ ನ್ಯಾಯ ಮಂಡಳಿ'** (Agriculture Tribunal) ಸ್ಥಾಪಿಸುವಂತೆ ನೀತಿ (NITI) ಆಯೋಗ ಇತ್ತೀಚಿಗೆ ಹೊರತಂದಿರುವ ವರದಿ: **"Strategy for New India @ 75"** ಯಲ್ಲಿ ಪ್ರಸ್ತಾಪಿಸಿರುತ್ತದೆ.

ಇದೂವರೆಗೂ ಖರೀದಿ ಕೈಗೊಳ್ಳಲು ಕಷ್ಟಸಾಧ್ಯವಾಗಿರುವ ಮುಸುಕಿನ ಜೋಳಕ್ಕೆ ಕೇಂದ್ರದ ನೂತನ **ಬೆಲೆ ಕೊರತೆ ಪಾವತಿಯೋಜನೆ** (ಭಾವಾಂತರ) ಸೂಕ್ತವಾಗಿರುತ್ತದೆ. ಹಾಗೇ ತೊಗರಿಗೂ ಈ ಯೋಜನೆ ಅಳವಡಿಸಬೇಕೆಂದು ಹೈದರಾಬಾದ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಒತ್ತಾಯಿಸಿರುತ್ತದೆ. ಇದರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ಟೊಮೆಟೊ, ಈರುಳ್ಳಿ ಈ ಎರಡು ತೋಟಗಾರಿಕ ಬೆಳೆಗಳಿಗೂ ಬೆಲೆ ಕೊರತೆ ಪಾವತಿ ಯೋಜನೆ ವಿಸ್ತರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೇಂದ್ರದೊಡನೆ ಸಮರ್ಥವಾಗಿ ಪ್ರಸ್ತಾಪಿಸಿ, ವ್ಯವಹರಿಸುವುದು ಸೂಕ್ತವಾಗಿದೆ.

**ರೈತರೆಡೆಗೆ ಮಾರುಕಟ್ಟೆ, ನಿಯಂತ್ರಿತ ಮಾರುಕಟ್ಟೆ ವ್ಯಾಪ್ತಿಯೊಳಗೇ ರೈತರ ಉತ್ಪನ್ನಗಳ ಮಾರಾಟ, ಅಡಮಾನ ಸಾಲದ ಸಮರ್ಪಕ ಬಳಕೆ ಹಾಗೂ ಮಾರುಕಟ್ಟೆ ಮಾಹಿತಿಯ ಸಮರ್ಥ ಪೂರೈಕೆಗೆ ಕರ್ನಾಟಕ ಕೃಷಿ ಮಾರಾಟ ಇಲಾಖೆಯನ್ನು ಸದೃಢಗೊಳಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಕೃಷಿ ಇಲಾಖೆ ಇವರ ವ್ಯಾಪ್ತಿಗೆ ತರುವುದು ಇಂದಿನ ತುರ್ತು ಅಗತ್ಯವಾಗಿದೆ.**

ಈ ಎಲ್ಲಾ ಮೇಲಿನ ವಿಚಾರಗಳಿಗನುಗುಣವಾಗಿ, **"ರಾಜ್ಯದ ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸದೃಢ ಮಾರುಕಟ್ಟೆ"** ಒದಗಿಸಲು ಕರ್ನಾಟಕ ಕೃಷಿ ಬೆಲೆ ಆಯೋಗ 13 **"ಬಹು-ಮುಖಿ ಶಿಫಾರಸ್ಸು"**ಗಳನ್ನು ಮುಂದಿಡುತ್ತಲಿದೆ.

ಕೃಷಿ ಬೆಲೆ ಆಯೋಗದ ಚಟುವಟಿಕೆಗಳನ್ನು ಆಸಕ್ತಿಯಿಂದ ಗಮನಿಸಿ, ಅಗತ್ಯ ಸಲಹೆ, ಸೂಚನೆ ನೀಡಿ ಪ್ರೋತ್ಸಾಹಿಸುತ್ತಿರುವ ಸಮ್ಮಿಶ್ರ ಸರ್ಕಾರದ ಕೃಷಿ ಸಚಿವರಾದ **ಶ್ರೀ.ಎನ್. ಹೆಚ್.ಶಿವಶಂಕರ್ ರೆಡ್ಡಿ**ಯವರಿಗೆ, ಆಯೋಗಕ್ಕೆ ಅಗತ್ಯವಿರುವ ಹಣಕಾಸು, ಆಡಳಿತಾತ್ಮಕ ನೆರವನ್ನು ಸಮರ್ಪಕವಾಗಿ ಒದಗಿಸುತ್ತಿರುವ ಸರ್ಕಾರದ ಕಾರ್ಯದರ್ಶಿಗಳಾದ **ಶ್ರೀ.ಎಂ.ಮಹೇಶ್ವರ್ ರಾವ್** ರವರಿಗೆ, ಆಯೋಗದ ಎಲ್ಲ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ರೈತ ಪ್ರತಿನಿಧಿ ಸದಸ್ಯರಾದ **ಶ್ರೀ.ಸಂಪತ್ ಸಾಮ್ರಾಜ್ಯ** ರವರಿಗೆ, ಸದಸ್ಯ ಕಾರ್ಯದರ್ಶಿಗಳು, ಆಯೋಗದ ಇತರೆ ಸದಸ್ಯರು, ವರದಿಯನ್ನು ಸಕಾಲದಲ್ಲಿ ಹೊರತರಲು ಸಹಕರಿಸಿದ ಮತ್ತೆಲ್ಲರಿಗೆ ಆಭಾರಿಯಾಗಿರುವೆನು. ಈ ವರದಿಯ ಲೇಖನ ಪರಿಷ್ಕಾರ ಮಾಡಿದ **ಶ್ರೀಮತಿ. ಅಂಬಿಕಾ** ರವರಿಗೆ ಧನ್ಯವಾದಗಳು.

ಡಿಸೆಂಬರ್ 2018
ಬೆಂಗಳೂರು

**ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ**
ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ

## ಪಟ್ಟಿ–1 (ಅ): 2017–18 ನೇ ಸಾಲಿನ ಕರ್ನಾಟಕದ ಪ್ರಮುಖ ಕೃಷಿ ಬೆಳೆಗಳ ವಿಸ್ತೀರ್ಣ,ಉತ್ಪಾದನೆ, ವೆಚ್ಚ ಮತ್ತು ಬೆಲೆಗಳ ವಿಶ್ಲೇಷಣೆಯ ವಾಸ್ತವ ಚಿತ್ರಣ

| ಕ್ರ. ಸಂ. | ಬೆಳೆಗಳು | ವಿಸ್ತೀರ್ಣ | | ಉತ್ಪಾದನೆ | | ಸರಾಸರಿ ಇಳುವರಿ (ಕಿಂ/ಎಕರೆ) | ಉತ್ಪಾದನ ವೆಚ್ಚ (ರೂ./ಕ್ವಿಂಟಾಲ್) | | ಮಾರುಕಟ್ಟೆ ಧಾರಣೆ (ರೂ./ ಕ್ವಿಂಟಾಲ್) | ಮಾರುಕಟ್ಟೆ ಧಾರಣೆಗೆ ಹೋಲಿಸಿದರೆ ಲಾಭ/ನಷ್ಟ (ಶೇ.) | | 2017–18 ರ ಕನಿಷ್ಠ ಬೆಂಬಲ ಬೆಲೆ (ರೂ./ಕ್ವಿಂಟಾಲ್)# | ಕನಿಷ್ಠ ಬೆಂಬಲ ಬೆಲೆಗೆ ಹೋಲಿಸಿದಲ್ಲಿ ವತ್ಯಾಸ (ಶೇ.) | |
|---|---|---|---|---|---|---|---|---|---|---|---|---|---|---|
| | | ಪ್ರಸಕ್ತ (ಲಕ್ಷ. ಹೆ.) | ದಶಕ ದಲ್ಲಾದ ಬದಲಾವಣೆ (ಶೇ.) | ಪ್ರಸಕ್ತ (ಲಕ್ಷ ಟನ್) | ದಶಕದಲ್ಲಾದ ಬದಲಾವಣೆ (ಶೇ.) | | ಭರಿಸಿದ ವೆಚ್ಚ+ ಕುಟುಂಬದ ಶ್ರಮ ($A_1$+FL) | ಒಟ್ಟು ವೆಚ್ಚ ($C_2$) | | ಭರಿಸಿದ ವೆಚ್ಚ+ ಕುಟುಂಬದ ಶ್ರಮ ($A_1$+FL) ದ ಮೇಲೆ | ಒಟ್ಟು ವೆಚ್ಚ ($C_2$)ದ ಮೇಲೆ | | ಭರಿಸಿದ ವೆಚ್ಚ+ ಕುಟುಂಬದ ಶ್ರಮದ ಮೇಲೆ ($A_1$+FL) | ಒಟ್ಟು ವೆಚ್ಚದ ಮೇಲೆ ($C_2$) |
| **I** | **ಏಕದಳ ಧಾನ್ಯಗಳು** | | | | | | | | | | | | | |
| 1 | ಭತ್ತ (ನೀ) | 9.68 (XIII) | -36 | 42.10 | -30 | 27.97 | 1234 | 1841 | 2079 | 68 | 13 | 1550 | 26 | -16 |
| | ಭತ್ತ (ಮಳೆ) | | | | | 18.06 | 1343 | 1898 | 1730 | 29 | -9 | 1550 | 15 | -18 |
| 2 | ರಾಗಿ | 7.75 (I) | -8 | 15.55 | 26 | 7.58 | 2349 | 3390 | 2214 | -6 | -35 | 1900 | -19 | -44 |
| 3 | ಹೈಬ್ರಿಡ್ ಜೋಳ | 10.89 (V) | -21 | 11.69 | -19 | 7.32 | 2283 | 2980 | 1292 | -43 | -57 | 1700 | -26 | -43 |
| | ಬಿಳಿ ಜೋಳ | | | | | 4.5 | 2651 | 3725 | 2482 | -6 | -33 | 1725 | -35 | -54 |
| 4 | ಮುಸುಕಿನ ಜೋಳ | 12.88 (I) | 21 | 54.32 | 84 | 20.16 | 1078 | 1504 | 1190 | 10 | -21 | 1425 | 32 | -5 |
| 5 | ಸಜ್ಜೆ | 2.32 (VI) | -13 | 3.67 | 103 | 5.17 | 3195 | 3898 | 1181 | -63 | -70 | 1425 | -55 | -63 |
| | **ಒಟ್ಟು/ಸರಾಸರಿ** | | ***-14*** | | ***7*** | | | | | ***-2*** | ***-30*** | | ***-9*** | ***-35*** |
| **II** | **ದ್ವಿದಳ ಧಾನ್ಯಗಳು** | | | | | | | | | | | | | |
| 6 | ತೊಗರಿ | 8.85 (II) | 48 | 8.40 | 168 | 4.92 | 5493 | 7117 | 5263 | -4 | -26 | 5450 | -1 | -23 |
| 7 | ಹೆಸರು | 3.97 (III) | 44 | 1.28 | 228 | 3.98 | 4379 | 5786 | 4564 | 4 | -21 | 5575 | 27 | -4 |
| 8 | ಉದ್ದು | 1.36 (VIII) | 21 | 0.65 | 103 | 3.28 | 5482 | 6894 | 3667 | -33 | -47 | 5400 | -1 | -22 |
| 9 | ಕಡಲೆ | 12.65 (IV) | 74 | 7.21 | 82 | 4.13 | 4609 | 5775 | 3889 | -16 | -33 | 4400 | -5 | -24 |
| | ***ಸರಾಸರಿ*** | | ***57*** | | ***124*** | | | | | ***-12*** | ***-32*** | | ***5*** | ***-18*** |
| **III** | **ಎಣ್ಣೆಕಾಳುಗಳು** | | | | | | | | | | | | | |
| 10 | ಶೇಂಗಾ | 6.15 (IV) | -28 | 6.43 | 62 | 5.11 | 4297 | 5729 | 4152 | -3 | -28 | 4450 | 4 | -22 |
| 11 | ಸೋಯಾ ಅವರೆ | 2.76 (IV) | 106 | 4.22 | 354 | 5.70 | 3541 | 4522 | 2840 | -20 | -37 | 3050 | -14 | -33 |
| 12 | ಸೂರ್ಯಕಾಂತಿ | 1.89 (I) | -81 | 1.44 | -65 | 3.92 | 4619 | 5991 | 2961 | -36 | -51 | 4100 | -11 | -32 |
| | ***ಸರಾಸರಿ*** | | ***-46*** | | ***34*** | | | | | ***-20*** | ***-38*** | | ***-7*** | ***-29*** |
| **IV** | **ವಾಣಿಜ್ಯ ಬೆಳೆಗಳು** | | | | | | | | | | | | | |
| 13 | ಹತ್ತಿ (ಉದ್ದ ಎಳೆ) | 5.46 (V) | 33 | 18.51 | 124 | 8.21 | 4098 | 5454 | 5162 | 26 | -5 | 4320 | 5 | -21 |
| 14 | ಒಣಮೆಣಸಿನಕಾಯಿ | 0.78 (III) | -36 | 1.41 | 4 | 14.08 | 6358 | 8678 | 8851 | 39 | 2 | | | |
| | ***ಸರಾಸರಿ*** | | ***17*** | | ***107*** | | | | | ***33*** | ***-2*** | | ***5*** | ***-21*** |
| **ಅ** | **ಕೃಷಿ–ಒಟ್ಟು/ಸರಾಸರಿ** | **87 (90%)α** | **-6** | **177 (38%)$** | **22** | | | | | **-5** | **-30** | | **-3** | **-27** |

ವಿ. ಸೂ. ಆವರಣದಲ್ಲಿರುವ ರೋಮನ್ ಸಂಖ್ಯೆಗಳು ದೇಶದಲ್ಲಿ ಕರ್ನಾಟಕದ ಸ್ಥಾನವನ್ನು ಬಿಂಬಿಸುತ್ತವೆ

# = ರಾಜ್ಯ ಸರ್ಕಾರ 2017–18 ನೇ ಸಾಲಿನಲ್ಲಿ ರಾಗಿ ಮತ್ತು ಜೋಳಕ್ಕೆ ರೂ. 400 ಅಧಿಕ ಪ್ರೋತ್ಸಾಹ ಬೆಲೆ ನೀಡಿರುತ್ತದೆ; α = ಒಟ್ಟು ರಾಜ್ಯದ ಕೃಷಿ ಭೂಮಿಯ ಶೇಕಡಾ ಪ್ರಮಾಣ; ವೆಚ್ಚ $A_1$ = ಎಲ್ಲಾ ಭರಿಸಿದ ವಾಸ್ತವಿಕ ನಗದು ವೆಚ್ಚ ಮತ್ತು ಸ್ಥಿರ ಆಸ್ತಿಯ ಮೇಲಿನ ಸವಕಳಿ

FL = ಕುಟುಂಬದ ಶ್ರಮದ ಬಾಬ್ತಿನ ವೆಚ್ಚ; ವೆಚ್ಚ $C_2$ = ವೆಚ್ಚ $A_1$ + FL + ಭೂಮಿಯ ಗೇಣಿ+ಸ್ಥಿರ ಹೂಡಿಕೆ ಮೇಲಿನ ಬಡ್ಡಿ ಸೇರಿ; $ = ಒಟ್ಟು ಕೃಷಿ ಉತ್ಪಾದನೆಯ ಶೇಕಡ ಪ್ರಮಾಣ

## ಪಟ್ಟಿ–1 (ಆ): 2017–18 ನೇ ಸಾಲಿನ ಕರ್ನಾಟಕದ ಪ್ರಮುಖ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ, ಉತ್ಪಾದನೆ, ವೆಚ್ಚ ಮತ್ತು ಬೆಲೆಗಳ ವಿಶ್ಲೇಷಣೆಯ ವಾಸ್ತವ ಚಿತ್ರಣ

| ಕ್ರ. ಸಂ. | ಬೆಳೆಗಳು | ವಿಸ್ತೀರ್ಣ | | ಉತ್ಪಾದನೆ | | ಸರಾಸರಿ ಇಳುವರಿ (ಕ್ವಿಂ./ಎಕರೆ) | ಉತ್ಪಾದನ ವೆಚ್ಚ (ರೂ./ಕ್ವಿಂಟಾಲ್) | | ಮಾರುಕಟ್ಟೆ ಧಾರಣೆ (ರೂ./ ಕ್ವಿಂಟಾಲ್) | ಮಾರುಕಟ್ಟೆ ಧಾರಣೆಗೆ ಹೋಲಿಸಿದರೆ ಲಾಭ/ನಷ್ಟ (ಶೇ.) | | 2017–18 ರ ಮಾರುಕಟ್ಟೆ ಮಧ್ಯಪ್ರವೇಶ ಬೆಲೆ/ ಕನಿಷ್ಠ ಬೆಂಬಲ ಬೆಲೆ (ರೂ./ಕ್ವಿಂಟಾಲ್)β | ಕನಿಷ್ಠ ಬೆಂಬಲ ಬೆಲೆಗೆ ಹೋಲಿಸಿದಲ್ಲಿ ವತ್ಯಾಸ (ಶೇ.) | |
|---|---|---|---|---|---|---|---|---|---|---|---|---|---|---|
| | | ಪ್ರಸಕ್ತ (ಲಕ್ಷ. ಹೆ.) | ದಶಕದಲ್ಲಾದ ಬದಲಾವಣೆ (ಶೇ.) | ಪ್ರಸಕ್ತ (ಲಕ್ಷ ಟನ್) | ದಶಕದಲ್ಲಾದ ಬದಲಾವಣೆ (ಶೇ.) | | ಭರಿಸಿದ ವೆಚ್ಚ+ ಕುಟುಂಬದ ಶ್ರಮ ($A_1$+FL) | ಒಟ್ಟು ವೆಚ್ಚ ($C_2$) | | ಭರಿಸಿದ ವೆಚ್ಚ+ ಕುಟುಂಬದ ಶ್ರಮ ($A_1$+FL) ದ ಮೇಲೆ | ಒಟ್ಟು ವೆಚ್ಚ ($C_2$) ದ ಮೇಲೆ | | ಭರಿಸಿದ ವೆಚ್ಚ+ ಕುಟುಂಬದ ಶ್ರಮದ ಮೇಲೆ ($A_1$+FL) | ಒಟ್ಟು ವೆಚ್ಚದ ಮೇಲೆ ($C_2$) |
| V | ತರಕಾರಿ ಬೆಳೆಗಳು | | | | | | | | | | | | | |
| 15 | ಟೊಮೆಟೊ | 0.59 (III) | 72 | 18.38 | 428 | 148.80 | 767 | 1009 | 921 | 20 | -9 | | | |
| 16 | ಈರುಳ್ಳಿ (ಉ) | 2.10 (II) | 55 | 33.46 | 364 | 62.66 | 745 | 1093 | 1253 | 68 | 15 | 624 | -16 | -43 |
| 17 | ಆಲೂಗೆಡ್ಡೆ | 0.30 (XI) | -61 | 4.66 | 89 | 36.47 | 1499 | 1872 | 1122 | -25 | -40 | | | |
| | *ಸರಾಸರಿ* | | ***22*** | | ***330*** | | | | | ***21*** | ***-11*** | | | |
| VI | ಹಣ್ಣಿನ ಬೆಳೆಗಳು | | | | | | | | | | | | | |
| 18 | ಏಲಕ್ಕಿ ಬಾಳೆ | 0.96 (I) | 58 | 24.06 | 127 | 92.77 | 884 | 1914 | 4038 | 357 | 111 | | | |
| | ಪಚ್ಚ ಬಾಳೆ (ಜಿ–9) | | | | | 290.10 | 285 | 1114 | 1409 | 394 | 26 | | | |
| 19 | ದ್ರಾಕ್ಷಿ (ಟೇಬಲ್) | 0.26 (II) | 115 | 5.02 | 58 | 115.34 | 1239 | 2317 | 3377 | 173 | 46 | | | |
| | ಒಣ ದ್ರಾಕ್ಷಿ | | | | | 39.28 | 4355 | 9217 | 16721 | 284 | 81 | | | |
| | ದ್ರಾಕ್ಷಿ (ಬೆಂಗಳೂರು ಬ್ಲೂ) | | | | | 115.44 | 931 | 1651 | 1576 | 69 | -5 | | | |
| 20 | ದಾಳಿಂಬೆ | 0.26 (II) | 46 | 2.07 | 8 | 58.37 | 1903 | 3298 | 4328 | 127 | 31 | | | |
| 21 | ಮಾವು | 2.40 (V) | 109 | 16.59 | 242 | 25.20 | 972 | 1540 | 1029 | 6 | -33 | | | |
| | *ಸರಾಸರಿ* | | ***89*** | | ***133*** | | | | | ***201*** | ***37*** | | | |
| VII | ತೋಟದ ಬೆಳೆಗಳು | | | | | | | | | | | | | |
| 22 | ತೆಂಗು | 5.19 (II) | 24 | 49.27 | 72 | 4964* | 8 | 13 | 14 | 75 | 8 | | | |
| | ಕೊಬ್ಬರಿ | | | | | 7.09 | 7587 | 11174 | 12871 | 70 | 15 | 7750 | 2 | -31 |
| 23 | ಕೆಂಪು ಅಡಕೆ | 2.82 (I) | 53 | 4.42 | 81 | 8.02 | 11744 | 22720 | 33613 | 186 | 48 | 27000 | 130 | 19 |
| | ಚಾಲಿ ಅಡಕೆ | | | | | 8.75 | 10095 | 20315 | 28030 | 178 | 38 | 25100 | 149 | 24 |
| | *ಸರಾಸರಿ* | | ***33*** | | ***73*** | | | | | ***127*** | ***27*** | | | |
| VIII | ಸಾಂಬಾರು ಬೆಳೆಗಳು | | | | | | | | | | | | | |
| 24 | ಶುಂಠಿ | 0.26 (I) | 1 | 2.96 | -64 | 126.8 | 1568 | 2094 | 2043 | 30 | -2 | | | |
| 25 | ಅರಿಶಿಣ | 0.22 (VI) | 52 | 0.65 | -4 | 23.26 | 2974 | 5416 | 8668 | 191 | 60 | 3 | | |
| 26 | ಕರಿ ಮೆಣಸು | 0.46 (II) | 163 | 0.19 | -74 | 2.29 | 27110 | 43277 | 39881 | 48 | -8 | | | |
| | *ಸರಾಸರಿ* | | ***64*** | | ***-60*** | | | | | ***90*** | ***17*** | | | |
| ಆ | **ತೋಟಗಾರಿಕೆ ಒಟ್ಟು/ಸರಾಸರಿ** | **16 (75%)µ** | **42** | **162 (98%)#** | **93.00** | | | | | **105** | **19** | | | |
| | **ಕೃಷಿ ಮತ್ತು ತೋಟಗಾರಿಕೆ ಒಟ್ಟು/ಸರಾಸರಿ (ಅ+ಆ)** | **103 (87%)€** | **-1** | **339 (54%)** | **48** | | | | | **70** | **-1** | | | |

ವಿ. ಸೂ. ಆವರಣದಲ್ಲಿರುವ ರೋಮನ್ ಸಂಖ್ಯೆಗಳು ದೇಶದಲ್ಲಿ ಕರ್ನಾಟಕದ ಸ್ಥಾನವನ್ನು ಬಿಂಬಿಸುತ್ತವೆ

* ತೆಂಗಿನಕಾಯಿ (ಸಂಖ್ಯೆಯಲ್ಲಿ); β = ಕರ್ನಾಟಕ ಸರ್ಕಾರ ಈರುಳ್ಳಿಗೆ (2016–17), ಅಡಕೆಗೆ (2016–17) ಮಾರುಕಟ್ಟೆ ಮಧ್ಯಪ್ರವೇಶ ಬೆಂಬಲ ಬೆಲೆ ಮತ್ತು ಕೊಬ್ಬರಿಗೆ 2017–18 ನೇ ಸಾಲಿನ ಬೆಂಬಲ ಬೆಲೆ ;

µ = ಒಟ್ಟು ತೋಟಗಾರಿಕೆ ಭೂಮಿಯ ಶೇಕಡಾ ಪ್ರಮಾಣ; € = ಒಟ್ಟು ಕೃಷಿ ಮತ್ತು ತೋಟಗಾರಿಕೆ ಭೂಮಿಯ ಶೇಕಡಾ ಪ್ರಮಾಣ ; ವೆಚ್ಚ $A_l$ = ಎಲ್ಲಾ ಭರಿಸಿದ ವಾಸ್ತವಿಕ ನಗದು ವೆಚ್ಚ ಮತ್ತು ಸ್ಥಿರ ಆಸ್ತಿಯ ಮೇಲಿನ ಸವಕಳಿ;

FL = ಕುಟುಂಬದ ಶ್ರಮದ ಬಾಬ್ತಿನ ವೆಚ್ಚ ; ವೆಚ್ಚ $C_2$ = ವೆಚ್ಚ $A_1$ + FL + ಭೂಮಿಯ ಗೇಣಿ+ಸ್ಥಿರ ಹೂಡಿಕೆ ಮೇಲಿನ ಬಡ್ಡಿ ಸೇರಿ

# ಕಾರ್ಯಕಾರಿ ಸಾರಾಂಶ

## ಕಾರ್ಯ ಪದ್ಧತಿ

- ರಾಜ್ಯದ 26 ಪ್ರಮುಖ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಉತ್ಪಾದನಾ ವೆಚ್ಚ, ಆವಕ, ಮಾರುಕಟ್ಟೆ, ಬೆಲೆ ಇವುಗಳ ವಿಶ್ಲೇಷಣೆ ನಡೆಸಿ ಈ **ವಸ್ತು ಸ್ಥಿತಿ** (Perspective Report) ವರದಿ ತಯಾರಿಸಲಾಗಿದೆ. ಈ 26 ಬೆಳೆಗಳು ಕರ್ನಾಟಕದ ಒಟ್ಟು ಕೃಷಿ ಭೂಮಿಯಲ್ಲಿ ಶೇ.87 ಭೂ ವಿಸ್ತೀರ್ಣವನ್ನು ಒಳಗೊಂಡಿದ್ದು ರಾಜ್ಯದ ಬಹುಪಾಲು ರೈತರ ಆರ್ಥಿಕ ಭದ್ರತೆಯ ಮೇಲೆ ಬೆಳಕು ಚೆಲ್ಲುತ್ತದೆ.

- **ರಾಜ್ಯದಾದ್ಯಂತ ಒಟ್ಟು 24 ಜಿಲ್ಲೆಗಳ 90 ತಾಲ್ಲೂಕುಗಳಿಂದ ಸಣ್ಣ, ಅತಿ ಸಣ್ಣ, ಮಧ್ಯಮ ಮತ್ತು ದೊಡ್ಡ ಹಿಡುವಳಿಯ ಸುಮಾರು 2000 ರೈತರಿಂದ ಮಾಹಿತಿ ಪಡೆಯಲಾಗಿದೆ. ಸಮೀಕ್ಷೆ ಪದ್ಧತಿ (Survey Method)ಯ ಮೂಲಕ ನಾಲ್ಕು ಸಾಗುವಳಿ ಹಂತಗಳಲ್ಲಿ (ಮೊಳಕೆ, ಬೆಳವಣಿಗೆ, ಮಾಗುವ ಮತ್ತು ಕೊಯಿಲು) ಅಂಕಿ ಅಂಶಗಳನ್ನು ಕಲೆಹಾಕಲಾಗಿದೆ.**

## ದಶಕದ ಬೆಳೆ ಪರಿವರ್ತನೆ

- ಕರ್ನಾಟಕದಲ್ಲಿ ಕಳೆದ ಒಂದು ದಶಕದಲ್ಲಿ ಕಡಲೆ (ಶೇ.74) ಮತ್ತು ಸೋಯಾಅವರೆ (ಶೇ.106) ಬೆಳೆಗಳ ವಿಸ್ತೀರ್ಣ ಅಧಿಕ ಪ್ರಮಾಣದಲ್ಲಿ ಏರಿಕೆಯಾಗಿದ್ದರೆ, ಶೇಂಗಾ (ಶೇ.–28), ಭತ್ತ ಹಾಗೂ ಒಣಮೆಣಸಿನಕಾಯಿ (ಶೇ.–36), ಸೂರ್ಯಕಾಂತಿ(ಶೇ.–81), ಒಟ್ಟಾರೆ ಕೃಷಿ ಬೆಳೆಗಳ ವಿಸ್ತೀರ್ಣ ಸುಮಾರು 6 ಲಕ್ಷ ಹೆಕ್ಟರ್‌ಗಳಷ್ಟು ಇಳಿಕೆಯಾಗಿರುವುದು ಆತಂಕಕಾರಿ.

- **ರಾಜ್ಯದ ಎರಡು ಪ್ರಮುಖ ಆಹಾರ ಬೆಳೆಗಳಾದ ಭತ್ತ ಮತ್ತು ಜೋಳದ ವಿಸ್ತೀರ್ಣ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ಇದಕ್ಕೆ ಅನುಗುಣವಾಗಿ ಭತ್ತ (18.34 ಲಕ್ಷ ಟನ್) ಹಾಗು ಜೋಳ (2.88 ಲಕ್ಷ ಟನ್) ಇವುಗಳ ಉತ್ಪಾದನೆಯಲ್ಲಿ ಕುಂಠಿತವಾಗಿರುವುದು ರಾಜ್ಯದ ಆಹಾರ ಭದ್ರತೆಯ ಮೇಲೆ ಪರಿಣಾಮ ಬೀರಿರುತ್ತದೆ.**

## ವೈಜ್ಞಾನಿಕ ವೆಚ್ಚ ಮತ್ತು ಆರ್ಥಿಕದಾಯಕತೆ

- ಸುಧಾರಿಸಿದ ಪದ್ಧತಿ ಅನುಸರಿಸಿ ಬೆಳೆಗಳ ಉತ್ಪಾದನಾ ವೆಚ್ಚವನ್ನು ಎಕರೆ ಮತ್ತು ಕ್ವಿಂಟಾಲ್ ಮಟ್ಟಗಳಲ್ಲಿ ರೈತರು **ಭರಿಸುವ ಮತ್ತು ಕುಟುಂಬದ ಶ್ರಮಗಳ** ವೆಚ್ಚ (Cost $A_1$ + FL) ಹಾಗೂ ಸ್ವಂತ ಭೂಮಿಗೆ ಗೇಣಿಯಂತಹ **ಅವಕಾಶ ವೆಚ್ಚಗಳನ್ನು** (Opportunity Cost) ಪರಿಗಣಿಸಿದ **ಒಟ್ಟು ವೆಚ್ಚ** (Cost $C_2$), ಒಟ್ಟು ವೆಚ್ಚಕ್ಕೆ ರೈತರ **ನಿರ್ವಹಣಾ ವೆಚ್ಚವನ್ನೂ** ಸೇರಿಸಿ **ಸಮಗ್ರ ವೆಚ್ಚ** (Cost $C_3$) ಹೀಗೆ ಮೂರು ವಿಧಗಳಲ್ಲಿ ಲೆಕ್ಕಾಚಾರ ಹಾಕಲಾಗಿದೆ.

- **ಸುಧಾರಿಸಿದ ವೆಚ್ಚದ ಲೆಕ್ಕಾಚಾರ ಪದ್ಧತಿಯ ಮುಖ್ಯಾಂಶಗಳು:**

1. **ಒಟ್ಟು ಆದಾಯದ** (Gross Income) ಶೇ.25ರಷ್ಟು ಪ್ರಮಾಣವನ್ನು **ಸ್ವಂತ ಭೂಮಿಯ ಗೇಣಿ** ಎಂದು ಹಾಗೂ ಒಟ್ಟು ಉತ್ಪಾದನಾ ವೆಚ್ಚದ ಮೇಲೆ ಶೇ.15 ರಷ್ಟನ್ನು ನಿರ್ವಹಣಾ ವೆಚ್ಚ (Managerial Cost) ಎಂದು ಪರಿಗಣಿಸುವುದು.
2. ಒಟ್ಟು ವಿಮಾ ಮೊತ್ತ (ಬೆಳೆ ಸಾಲ) ದ ಮೇಲೆ ಶೇ.1.5 ರಿಂದ ಶೇ.5.0 ರಷ್ಟನ್ನು **ಗಂಡಾಂತರ (Risk) ಪ್ರೀಮಿಯಂ** ಎಂದು ಪರಿಗಣಿಸುವುದು.
3. ಚರ ವೆಚ್ಚದ (Working Capital) ಮತ್ತು ಸ್ಥಿರ ಹೂಡಿಕೆ (Fixed Capital)ಯ ಮೇಲಿನ ಬಡ್ಡಿ ಪ್ರಮಾಣ ಶೇ.15 ರಷ್ಟೆಂದು ಪರಿಗಣಿಸುವುದು.
4. ಬಹುವಾರ್ಷಿಕ ಬೆಳೆಗಳ **ಸ್ಥಾಪನಾ ವೆಚ್ಚದ** (Establishment Cost) **ವಾರ್ಷಿಕ ಪ್ರಮಾಣವನ್ನು** (Amortized Cost) ಸ್ಥಿರ ವೆಚ್ಚವೆಂದು ಪರಿಗಣಿಸಲಾಗಿರುತ್ತದೆ.

- ರಾಜ್ಯದ ರೈತರು ಕ್ವಿಂಟಾಲ್ ಒಂದರ ಉತ್ಪಾದನೆಗೆ ಭರಿಸಿದ ವೆಚ್ಚ ಹಾಗೂ ಕುಟುಂಬದ ಶ್ರಮ (Cost $A_1$ + FL) ಪರಿಗಣಿಸಿದರೆ 2017–18ನೇ ಸಾಲಿನ ಮಾರುಕಟ್ಟೆಯಲ್ಲಿ ದೊರೆತ ಧಾರಣೆ, ಒಟ್ಟಾರೆ ಕೃಷಿ ಬೆಳೆಗಳಲ್ಲಿ ಸರಾಸರಿ ಶೇ.5 ರಷ್ಟು ಕಡಿಮೆಯಾಗಿದ್ದು, ರೈತರು ನಷ್ಟ ಅನುಭವಿಸುವಂತಾಗಿರುವರು. ಆದರೆ, ಆಲೂಗಡ್ಡೆ ಹೊರತಾಗಿ ಇತರೆ ಎಲ್ಲಾ ತೋಟಗಾರಿಕೆ ಉತ್ಪನ್ನಗಳಿಗೆ ಅಧಿಕ ಧಾರಣೆ ಸಿಕ್ಕಿದ್ದು, ಸರಾಸರಿ ಶೇ.105 ರಷ್ಟು ಲಾಭ ಪಡೆದಿರುತ್ತಾರೆ.

- **ಒಟ್ಟಾರೆ ಎಲ್ಲಾ ಬೆಳೆಗಳಲ್ಲಿ ಶ್ರಮದ ಬಾಬ್ತಿನ ಖರ್ಚು ಸಮಗ್ರ ವೆಚ್ಚದಲ್ಲಿ ಸರಾಸರಿ ಶೇ.31 ರಷ್ಟು ಪ್ರಮಾಣವನ್ನು ಆಕ್ರಮಿಸಿಕೊಂಡಿದ್ದು, ಕರ್ನಾಟಕದ ಕೃಷಿ ಅತೀ ಶ್ರಮ ಬೇಡುವ ಕಸುಬಾಗಿ ಪರಿವರ್ತನೆಯಾಗಿರುತ್ತದೆ ಎಂದಾಯ್ತು !**

- ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನಾ ವೆಚ್ಚದಲ್ಲಿ ಸರಾಸರಿ ಶೇ.54 ರಷ್ಟು ನಾಟಿ ಮಾಡಿ ಬೀಜ ಹಾಕಿ ಸಸ್ಯ ಮೊಳಕೆ ಬರುವ ಹಂತದಲ್ಲೇ ಖರ್ಚಾಗಿರುತ್ತದೆ. ಇನ್ನು ಬೆಳವಣಿಗೆ, ಸಸ್ಯ ಕೊಯ್ಲು ಹಂತಗಳಲ್ಲಿ ಶೇ.20 ರಷ್ಟು ವೆಚ್ಚವಾಗಿರುತ್ತದೆ.

- **ಆದರೆ ಭೂಮಿಯ ಗೇಣಿಯಂತಹ ಅವಕಾಶ ವೆಚ್ಚವನ್ನು (Opportunity Costs) ಸೇರಿಸಿ ಒಟ್ಟು ವೆಚ್ಚ (Cost $C_2$) ಪರಿಗಣಿಸಿದರೆ ವಿವಿಧ ಕೃಷಿ ಬೆಳೆಗಳ ವ್ಯವಸಾಯ ಕೈಗೊಂಡ ರೈತರು ಸರಾಸರಿ ಶೇ.30 ರಷ್ಟು ನಷ್ಟ ಅನುಭವಿಸುವಂತಾಗಿರುವರು.**

## ಅಸಮರ್ಪಕ ಬೆಂಬಲ ಬೆಲೆ

- ಕೇಂದ್ರ ಸರ್ಕಾರ ಪರಿಗಣಿಸಿರುವ ವಿವಿಧ ಬೆಳೆಗಳ ರಾಷ್ಟ್ರಮಟ್ಟದ ಸರಾಸರಿ ಉತ್ಪಾದನಾ ವೆಚ್ಚ ರಾಜ್ಯದ ರೈತರು ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಗಮನಾರ್ಹವಾಗಿ ಕಡಿಮೆಯಿದ್ದು, ಕಳೆದ ಸಾಲಿನಲ್ಲಿ ಘೋಷಿಸಿರುವ ಬೆಂಬಲ ಬೆಲೆ ಒಟ್ಟಾರೆ, ಎಲ್ಲಾ ಬೆಳೆಗಳನ್ನು ಪರಿಗಣಿಸಿದರೆ ಶೇ.3 ರಷ್ಟು ಕೊರತೆ ಸೃಷ್ಟಿಸಿರುತ್ತದೆ.

- **ಇನ್ನು, ಕರ್ನಾಟಕ ಕೃಷಿ ಬೆಲೆ ಆಯೋಗದ ಒಟ್ಟು ವೆಚ್ಚ (Cost $C_2$) ವನ್ನು ಪರಿಗಣಿಸಿದರಂತೂ ರಾಜ್ಯದ ರೈತಾಪಿ ವರ್ಗಕ್ಕೆ ಈ ಸಾಲಿನ ಕನಿಷ್ಠ ಬೆಂಬಲ ಬೆಲೆ ಲಾಭದ ಬದಲಿಗೆ ಸರಾಸರಿ ಶೇ.27 ರಷ್ಟು ನಷ್ಟ ತಂದಿರುತ್ತದೆ. ಅಂದರೆ ಲಾಭದಾಯಕ ಬೆಲೆ ವಿಚಾರದಲ್ಲಿ ಮಾರುಕಟ್ಟೆ ಮತ್ತು ಸರ್ಕಾರ ಎರಡೂ ಕಡೆಗಳಿಂದಲೂ ರೈತರಿಗೆ ನ್ಯಾಯ ದೊರಕುತ್ತಿಲ್ಲ ಎಂದಾಯ್ತು.**

## ವೆಚ್ಚ ಇಳಿಕೆ ಮತ್ತು ಇಳುವರಿ ಹೆಚ್ಚಳದತ್ತ ಗಮನ

- ಭತ್ತದಂತಹ ಸ್ಥಿರವಾದ ಆದಾಯ ನೀಡುವ ಆಹಾರ ಬೆಳೆಗಳಿಗೆ ಹೋಲಿಸಿದ್ದಲ್ಲಿ ಉತ್ಪಾದನಾ ವೆಚ್ಚ ಮಾತ್ರವಲ್ಲ **ಮಾಸಿಕ ಬೆಲೆ ಏರಿಳಿತ** (Co-efficient of Variation - CV) ಈರುಳ್ಳಿ ಹಾಗೂ ಟೊಮೊಟೊದಂತಹ ತರಕಾರಿ ಬೆಳೆಗಳಲ್ಲಿ ಭಾರೀ ಪ್ರಮಾಣದಲ್ಲಿ ಅಧಿಕವಾಗಿರುತ್ತದೆ. ಕೇವಲ ಲಾಭಕ್ಕೆ ಒತ್ತು ಕೊಡುವ ಬದಲು ವೆಚ್ಚ ಇಳಿಕೆ ಹಾಗೂ ಸ್ಥಿರವಾದ ಧಾರಣೆ ಗಮನಿಸಿ, ಸೂಕ್ತ ಬೆಳೆ ಪದ್ಧತಿಗಳನ್ನು ರೈತರು ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ.

- **ಕೃಷಿ ಯಾಂತ್ರೀಕರಣದ ಮೂಲಕ ಉತ್ಪಾದನಾ ವೆಚ್ಚದ ಇಳಿಕೆಯತ್ತ ಗಮನಹರಿಸಿದ್ದೇ ಆದಲ್ಲಿ ನಮ್ಮ ಕೃಷಿ ಲಾಭದಾಯಕವಾಗಲಿದೆ ಎಂಬ ವಿಚಾರವನ್ನು ಕೃಷಿ ಬೆಲೆ ಆಯೋಗವು ಗಮನಿಸಿ ವಿವಿಧ ಬೆಳೆಗಳಲ್ಲಿ ಲೆಕ್ಕಾಚಾರ ಹಾಕಿ ತೋರಿಸಿರುತ್ತದೆ. ಇದನ್ನು ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ (CACP) ಶ್ಲಾಘಿಸಿ ತನ್ನ 2016–17 ರ ಮುಂಗಾರು ಬೆಳೆಗಳ ಬೆಲೆ ನೀತಿಯಲ್ಲಿ ವರದಿ ಮಾಡಿರುತ್ತದೆ.**

- ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಭೂಮಿ ಸಿದ್ಧತೆಯ ಕಾರ್ಯಕ್ಕೆ 8 ಯಂತ್ರೋಪಕರಣಗಳು ಲಭ್ಯವಿದ್ದು, ಇವುಗಳ ಬಳಕೆಯಿಂದ ಶ್ರಮದ ಅಗತ್ಯ ಕಡಿಮೆಯಾಗಿ ಉತ್ಪಾದನಾ ವೆಚ್ಚದಲ್ಲಿ ಶೇ.37 ರಷ್ಟು ಕಡಿತಗೊಳಿಸಬಹುದು. ಇದೇ ರೀತಿ ಕೊಯ್ಲನೋತ್ತರದ ಕಾರ್ಯಗಳಿಗೆ ಸುಮಾರು 26 ವಿವಿಧ ಯಂತ್ರಗಳು ಲಭ್ಯವಿದ್ದು, ಇವುಗಳ ಬಳಕೆಯಿಂದ ಸರಾಸರಿ ಶೇ. 49 ರಷ್ಟು ಶ್ರಮದ ಬಾಬ್ತಿನ ವೆಚ್ಚ ಇಳಿಸಬಹುದಾಗಿದೆ.

- **"ಕೃಷಿಭಾಗ್ಯ" ಯೋಜನೆಯ ಮೂಲಕ ಮಳೆ ನೀರು ಸಂಗ್ರಹಿಸಿ, ಬಳಸಿದರೆ ವಿವಿಧ ಬೆಳೆಗಳಲ್ಲಿ ಸರಾಸರಿ ಶೇ.77 ರಷ್ಟು ಇಳುವರಿ ಅಧಿಕವಾಗಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಹೀಗೆ, ಉತ್ಪಾದಕತೆ ಹೆಚ್ಚಳ, ಯಾಂತ್ರೀಕರಣದ ಮೂಲಕ ವೆಚ್ಚ ಇಳಿಕೆಗಳತ್ತ ಗಮನ ಹರಿಸಿ ಸದ್ಯದ ಧಾರಣೆ ವ್ಯವಸ್ಥೆಯಿಂದಲೇ ಲಾಭ ಪಡೆಯುವುದನ್ನು ರೈತರು ಅರಿಯಬೇಕಾಗಿದೆ.**

## ನಿಯಂತ್ರಿತ ಮಾರುಕಟ್ಟೆಯಲ್ಲಿ ವ್ಯವಹಾರ

- ರೈತರು ಬೆಳೆದ ಬಹುತೇಕ ಉತ್ಪನ್ನ **ನಿಯಂತ್ರಿತ ಮಾರುಕಟ್ಟೆ** (ಎ.ಪಿ.ಎಂ.ಸಿ.) ವ್ಯಾಪ್ತಿಯ ಹೊರಗೇ ಮಾರಾಟವಾಗುತ್ತಿರುವುದು ಮಾತ್ರವಲ್ಲ, ಬಂದಂತಹ ಉತ್ಪನ್ನಗಳಿಗೆ ಸರ್ಕಾರವು ಘೋಷಿಸುವ ಕನಿಷ್ಠ ಬೆಂಬಲ ಬೆಲೆ ಕೂಡ ದೊರಕದಿರುವುದು ನಮ್ಮ ಮಾರಾಟ ವ್ಯವಸ್ಥೆಯ ವೈಫಲ್ಯವಾಗಿರುತ್ತದೆ.

- **2017–18 ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಮೂಲದ ಅಂಕಿ ಅಂಶಗಳಿಗೆ ಹೋಲಿಸಿದರೆ ರೈತರು ಬೆಳೆದ ಪ್ರಮುಖ ಬೆಳೆಗಳ ಒಟ್ಟು ಉತ್ಪಾದನೆಯಲ್ಲಿ ಶೇ.23ರ ಪ್ರಮಾಣ ಮಾತ್ರ ನಿಯಂತ್ರಿತ ಮಾರುಕಟ್ಟೆ ಪರಧಿಯಲ್ಲಿ ಮಾರಾಟವಾಗಿರುತ್ತದೆ. ಈ ಉತ್ಪನ್ನಗಳಲ್ಲಿ ಸರಾಸರಿ ಶೇ.41 ರಷ್ಟು ಪ್ರಮಾಣ ಮಾತ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಗಿಂತ ಅಧಿಕ ಮಟ್ಟದಲ್ಲಿ ಮಾರಾಟವಾಗಿರುತ್ತದೆ.**

### ಸರ್ಕಾರದಿಂದ ಖರೀದಿ

- ರಾಜ್ಯದ ರೈತರ ಹಿತ ರಕ್ಷಣೆ ದೃಷ್ಟಿಯಿಂದ ಕಳೆದ 5 ವರ್ಷಗಳಲ್ಲಿ ಸುಮಾರು 9 ಲಕ್ಷ ರೈತ ಫಲಾನುಭವಿಗಳಿಂದ 7635 ಕೋಟಿ ಮೌಲ್ಯದ 257 ಲಕ್ಷ ಕ್ವಿಂಟಾಲ್‌ನಷ್ಟು ವಿವಿಧ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ಕರ್ನಾಟಕ ಸರ್ಕಾರ ಖರೀದಿಸಿರುತ್ತದೆ.

- **2013–14 ರಲ್ಲಿ 71 ಲಕ್ಷ ಕ್ವಿಂಟಾಲ್‌ನಷ್ಟು ಅಧಿಕ ಮುಸುಕಿನ ಜೋಳ ಮತ್ತು ಸುಮಾರು 23 ಲಕ್ಷ ಕ್ವಿಂಟಾಲ್ ಭತ್ತ, 2015–16 ರಲ್ಲಿ 20 ಲಕ್ಷ ಕ್ವಿಂಟಾಲ್ ರಾಗಿ ಹಾಗೂ 2016–17ರಲ್ಲಿ 35 ಲಕ್ಷ ಕ್ವಿಂಟಾಲ್ ತೊಗರಿ ಇವುಗಳನ್ನು ಪ್ರೋತ್ಸಾಹ ಧನ ನೀಡಿ ಅಧಿಕ ಧಾರಣೆಯಲ್ಲಿ ಖರೀದಿಸಿರುವುದು ಕರ್ನಾಟಕ ಸರ್ಕಾರದ ದಾಖಲೆ ಮಾರುಕಟ್ಟೆ ಮಧ್ಯಪ್ರವೇಶವಾಗಿರುತ್ತದೆ.**

- ಆದರೆ, 2017–18 ನೇ ಸಾಲಿನಲ್ಲಿ ಹೆಸರು ಮತ್ತು ಉದ್ದಿನ ಬೆಳೆಗಳ ಒಟ್ಟು ಉತ್ಪಾದನೆಯಲ್ಲಿ ಸುಮಾರು ಶೇ.33ರಷ್ಟು ಪ್ರಮಾಣ ಸರ್ಕಾರ ಖರೀದಿ ಕೈಗೊಳ್ಳುವ ಮೊದಲೇ ವಿಕ್ರಯವಾಗಿದ್ದರೆ, ಕಡಲೆ ಖರೀದಿ ಪ್ರಾರಂಭಿಸುವ ಮೊದಲು ಅರ್ಧದಷ್ಟು ಆವಕ ಆಗಲೇ ಮಾರುಕಟ್ಟೆಯಲ್ಲಿ ಮಾರಾಟವಾಗಿರುತ್ತದೆ. ಹಾಗಾಗಿ ಸಕಾಲದಲ್ಲಿ ಖರೀದಿ ಪ್ರಾರಂಭ ಅತ್ಯಗತ್ಯವಾಗಿರುತ್ತದೆ.

### ಈ ಸಾಲಿನ ಉತ್ಪಾದನಾ ಪರಿಸ್ಥಿತಿ

- ಒಟ್ಟಾರೆ ಕೃಷಿ ಬೆಳೆಗಳ ವಿಸ್ತೀರ್ಣ ಕಳೆದ ಸಾಲಿಗೆ ಹೋಲಿಸಿದರೆ ಶೇ.2 ರಷ್ಟು ಕಡಿಮೆಯಾಗಿರುವುದಾಗಿ ಕೃಷಿ ಇಲಾಖೆಯ ಮೂಲದಿಂದ ತಿಳಿದುಬಂದಿರುತ್ತದೆ. ಆದರೆ ತೋಟಗಾರಿಕೆ ಇಲಾಖೆಯ ಮಾಹಿತಿ ಪ್ರಕಾರ ಕಳೆದ ಸಾಲಿಗೆ ಹೋಲಿಸಿದಲ್ಲಿ ಈರುಳ್ಳಿ ಬೆಳೆ ವಿಸ್ತೀರ್ಣ ಬಹುತೇಕ ದ್ವಿಗುಣಗೊಂಡಿದ್ದು, ಉತ್ಪಾದನೆ ಅಧಿಕವಾಗಿ ಧಾರಣೆ ಕುಸಿಯುವ ಸಾಧ್ಯತೆಯಿದೆ.

- **ವಿವಿಧ ಬೆಳೆಗಳ ಮಾರುಕಟ್ಟೆ ಆವಕ ಮಾಸಿಕ ಸೂಚಕ (Index) ಅವಲೋಕನದ ಪ್ರಕಾರ ನಮ್ಮ ಬಹುತೇಕ ಕೃಷಿ ಬೆಳೆಗಳ ಹಾಗೂ ಈರುಳ್ಳಿ, ಅಡಕೆ ಮತ್ತು ತೆಂಗು ಉತ್ಪನ್ನಗಳ ಆವಕ ಪ್ರಮಾಣ ಸಾಮಾನ್ಯವಾಗಿ ಅಕ್ಟೋಬರ್‌ನಿಂದ ಜನವರಿ ತಿಂಗಳುಗಳವರೆಗೆ ಅಧಿಕವಾಗಿರುತ್ತದೆ. ಬೆಲೆ ಆಯೋಗದ ಪರಿಶೀಲನೆ ಪ್ರಕಾರ ಭತ್ತ, ಮುಸುಕಿನಜೋಳ ಮತ್ತು ಸಜ್ಜೆ ಧಾರಣೆ ನವೆಂಬರ್ ಮೂರನೇ ವಾರಾಂತ್ಯದಲ್ಲಿ ಕಳೆದ ಸಾಲಿಗೆ ಹೋಲಿಸಿದಲ್ಲಿ ಇಳಿಕೆಯಾಗಿರುವುದು ಮಾತ್ರವಲ್ಲ ಬೆಂಬಲ ಬೆಲೆಗಿಂತ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ.**

### ಸರ್ಕಾರದ ಮುಂದೆ ಪ್ರಸ್ತಾವನೆಗಳು

- ಬೆಲೆ ಆಯೋಗದ ನೂತನ **ಡ್ಯಾಶ್‌ಬೋರ್ಡ್ 'ಕೃಪ'** ವ್ಯವಸ್ಥೆಯ ಮೂಲಕ ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ವಿವಿಧ ಮಾರುಕಟ್ಟೆಗಳ ಧಾರಣೆ ಮತ್ತು ಆವಕದ ಮೇಲೆ ತೀವ್ರ ನಿಗಾ ವಹಿಸಿ, ಧಾರಣೆ ಇಳಿಮುಖ ಕಂಡೊಡನೆ ವಿಳಂಬವಾಗದಂತೆ ಶೀಘ್ರವಾಗಿ ಮಧ್ಯಪ್ರವೇಶಿಸಲು ಈಗಾಗಲೇ ಕರ್ನಾಟಕ ಸರ್ಕಾರದ ಮುಂದೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

- **ಟೊಮೆಟೊ ಹಾಗೂ ಈರುಳ್ಳಿ ಉತ್ಪನ್ನಗಳ ಧಾರಣೆ ಸ್ಥಿರೀಕರಣಕ್ಕೆ ಬೆಲೆ ಆಯೋಗ ಪ್ರಸ್ತಾಪಿಸಿರುವ ವಿನೂತನ 'ಬೆಲೆ ಕೊರತೆ ಪಾವತಿ ಯೋಜನೆ'ಗೆ (Price Deficiency Payment Scheme) ಮಾನ್ಯ ಮುಖ್ಯಮಂತ್ರಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದ್ದು, ಈರುಳ್ಳಿಯಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಈಗಾಗಲೇ ಮುಂದಾಗಿರುವುದು ಅತ್ಯಂತ ಸ್ವಾಗತಾರ್ಹ.**

- ಸರ್ಕಾರದ ಕೋರಿಕೆಯಂತೆ ಖರೀದಿಗೆ ಅನುವು ಮಾಡಿಕೊಡಲು 6 ಪ್ರಮುಖ ಸಿರಿಧಾನ್ಯ ಬೆಳೆಗಳಾದ **ಊದಲು** (Barnyard Millet), **ಕೊರಲೆ** (Browntop Millet), **ನವಣೆ** (Foxtail Millet), **ಹಾರಕ** (Kodo Millet), **ಸಾಮೆ** (Little Millet) ಮತ್ತು **ಬರಗು** (Proso Millet) ಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕಿ ಸಿದ್ಧಪಡಿಸಲಾಗಿರುತ್ತದೆ.

- **ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸರಕು ಮತ್ತು ಸೇವಾ ತೆರಿಗೆ (GST) ವ್ಯವಸ್ಥೆಯಿಂದ ರೈತರ ಮೇಲೆ ಅಧಿಕ ಕರದ ಹೊರೆಯ ಪ್ರಮಾಣ ಮತ್ತು ಪರಿಣಾಮವನ್ನು ಸಮಗ್ರವಾಗಿ ವಿಶ್ಲೇಷಿಸಿ ಕೇಂದ್ರದ ಸರಕು ಮತ್ತು ಸೇವಾ ತೆರಿಗೆ ಪರಿಷತ್ (GST Council)ನ ಮುಂದೆ ಪ್ರಸ್ತಾಪಿಸಲು ಟಿಪ್ಪಣಿಯೊಂದನ್ನು ತಯಾರಿಸಿ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ.**

# ಬಹು – ಮುಖಿ ಶಿಫಾರಸ್ಸುಗಳು

ಒಂದು ಸ್ಪರ್ಧಾತ್ಮಕ ಮಾರುಕಟ್ಟೆ ವ್ಯವಸ್ಥೆಗೆ ಪೂರಕವಾಗಿ ಸರ್ಕಾರದ ಸಮರ್ಥ ಮಧ್ಯಪ್ರವೇಶದಿಂದ ರೈತರ ಉತ್ಪನ್ನಗಳಿಗೆ ಊಹಿಸಲು ಸಾಧ್ಯವಾದ (Predictable) ಲಾಭದಾಯಕ ಬೆಲೆ ದೊರಕಿಸಬಹುದು.ಇವುಗಳ ಜೊತೆಗೆ ರೈತರ ಚೌಕಾಸಿ ಶಕ್ತಿ ಹೆಚ್ಚಿಸುವ ಸಾಂಘಿಕ ಪ್ರಯತ್ನ, ಅಗತ್ಯಕ್ಕನುಗುಣವಾದ **ಉತ್ಪಾದನಾ ನೀತಿ** ಮತ್ತು ಸೂಕ್ತ **ಬೆಳೆ ಯೋಜನೆ** (Crop Plan), ಬೆಲೆ ಮುನ್ಸೂಚನೆ ಇತ್ಯಾದಿ ಮಾರುಕಟ್ಟೆ ಜ್ಞಾನದ ಸಕಾಲಿಕ ಪೂರೈಕೆಗಳು ಅತ್ಯಗತ್ಯ.

**ಇವೆಲ್ಲಾ ಸಫಲವಾಗದೇ ಮಧ್ಯವರ್ತಿಗಳ ಪಾತ್ರ ಮತ್ತು ಕೈವಾಡ ಅತೀಯಾಗಿ ಪಟ್ಟಭದ್ರ ಹಿತಾಸಕ್ತಿರೂಪ ಪಡೆದಿರುವುದು ಖಚಿತವಾದಾಗ ರೈತರ ಉತ್ಪನ್ನಗಳಿಗೆ ನ್ಯಾಯಯುತ ಧಾರಣೆ ದೊರಕಿಸುವ ನಿಟ್ಟಿನಲ್ಲಿ ಕಾನೂನಿನ ಅಂತಿಮ ಅಸ್ತ್ರ ಬಳಸುವುದು ಅನಿವಾರ್ಯವಾಗಲಿದೆ.**

ರಾಜ್ಯದ ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸದೃಢ ಮಾರುಕಟ್ಟೆ ಒದಗಿಸಲು ಕರ್ನಾಟಕ ಕೃಷಿ ಬೆಲೆ ಆಯೋಗ ಮುಂದಿನ 13 **"ಬಹು–ಮುಖಿ ಶಿಫಾರಸ್ಸು"** ಗಳನ್ನು ಸರ್ಕಾರದ ಮುಂದಿಡುತ್ತಲಿದೆ:

## 1. ರೈತರ ಉತ್ಪನ್ನಗಳ ಧಾರಣೆ ಮತ್ತು ವಿಕ್ರಯಗಳನ್ನು ಕಾನೂನಿನ ವ್ಯಾಪ್ತಿಗೆ ತರುವುದು

- ರಾಜ್ಯ ಸರ್ಕಾರ ಈಗ ಚಾಲ್ತಿಯಲ್ಲಿರುವ **"ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯಿದೆ". [Karnataka Agricultural Produce Marketing (Regulation and Development)] Act, 1966,** ಕ್ಕೆ ಮಹಾರಾಷ್ಟ್ರ ಮಾದರಿಯಲ್ಲಿ ಸೂಕ್ತ ತಿದ್ದುಪಡಿ ತಂದು ಕೇಂದ್ರ ಸರ್ಕಾರ ಘೋಷಿಸುವ ಕನಿಷ್ಠ ಬೆಂಬಲ ಬೆಲೆ (Minimum Support Price) ಅಥವಾ ಉತ್ಪಾದನಾ ವೆಚ್ಚದ ಆಧಾರದ ಮೇಲೆ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ **ಅಧಿಕೃತ ಕನಿಷ್ಠ ಖರೀದಿ ಬೆಲೆ** (Statutory Minimum Purchase Price) ನಿರ್ಧರಿಸುವುದು.

- **ಈ ಅಧಿಕೃತ ಕನಿಷ್ಠ ಖರೀದಿ ಬೆಲೆಗಿಂತ ಕಡಿಮೆ ದರದಲ್ಲಿ ರಾಜ್ಯದ ರೈತರ ಉತ್ಪನ್ನಗಳು ಖರೀದಿಯಾಗದಂತೆ ನಿಯಮತಂದು, ಉಲ್ಲಂಘನೆಯಾಗದಂತೆ ಸೂಕ್ತ ಕ್ರಮ, ದಂಡ (Penalty) ಇತ್ಯಾದಿ ವಿಧಿ ವಿಧಾನ, ಷರತ್ತುಗಳನ್ನೂ ರೂಪಿಸಿ ಅನುಷ್ಠಾನಗೊಳಸುವುದು. ಹಾಗೆಯೇ ರಾಷ್ಟ್ರಮಟ್ಟದ ಅನುಷ್ಠಾನಕ್ಕೆ ಕೇಂದ್ರದ "ಅಗತ್ಯ ಸರಕುಗಳ ಕಾಯಿದೆ –1955" ಕ್ಕೂ ತಿದ್ದುಪಡಿ ತರುವುದು.**

## 2. ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸುವುದು

- ಪಡಿತರ ವ್ಯವಸ್ಥೆಯಲ್ಲಿ ವಿತರಿಸುವುದರ ಜೊತೆಗೆ **ಸಮಾಜ ಕಲ್ಯಾಣ** ಇಲಾಖೆಯಡಿಗಿನ ವಿವಿಧ ಕಾರ್ಯಕ್ರಮಗಳಿಗೆ ಸರ್ಕಾರವೇ ಅತ್ಯಧಿಕ ಪ್ರಮಾಣದಲ್ಲಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಬಳಸುತ್ತಿದ್ದರೂ, ರಾಜ್ಯದ ರೈತರಿಂದ ನೇರವಾಗಿ ಖರೀದಿಸುತ್ತಿರುವುದು ಬಹಳ ಕಡಿಮೆ ಪ್ರಮಾಣದ್ದಾಗಿದೆ.

- **ರೈತರಿಂದ ಖರೀದಿ ಅಧಿಕಗೊಳಿಸಲು ಮಳೆ ಆಶ್ರಯದ ಭತ್ತದ ಕೃಷಿ ಸದೃಢಗೊಳಿಸುವುದು, ರಾಗಿ ಮತ್ತು ಹಿಂಗಾರು ಜೋಳ ಕೃಷಿ ಅಭಿವೃದ್ಧಿ ಪಡಿಸುವುದು ಮತ್ತು ಎರಡು ಪ್ರಮುಖ ಎಣ್ಣೆ ಬೀಜಗಳಾದ ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಗಳ ವಿಸ್ತೀರ್ಣ ಕಡಿಮೆಯಾಗುತ್ತಿರುವುದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.**

## 3. ಖರೀದಿ ವ್ಯವಸ್ಥೆ ವಿಸ್ತೃತಗೊಳಿಸುವುದು

- ಕೇಂದ್ರ ಸರ್ಕಾರವು ಈ ಸಾಲಿನಲ್ಲಿ ಜಾರಿಗೊಳಿಸಿರುವ **ಪ್ರಧಾನ ಮಂತ್ರಿ ಆಶಾ** (PM - AASHA) ಕಾರ್ಯಯೋಜನೆಯನ್ನು ಸಮರ್ಪಕವಾಗಿ ಬಳಸಿ ರಾಜ್ಯದಲ್ಲಿ ಖರೀದಿ ವ್ಯವಸ್ಥೆ ಸದೃಢಗೊಳಿಸುವುದು. ಹಾಗೆಯೇ, ಈ ಹಿಂದೆ ಪ್ರಸ್ತಾಪಿಸಿರುವ **'ಮಾರುಕಟ್ಟೆ ಭರವಸೆ ಯೋಜನೆ'** (Market Assurance Scheme) ಯನ್ನೂ ಜಾರಿಗೆ ತರುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದು.

- **ಈಗಿನ ಅನ್ನಭಾಗ್ಯ ಯೋಜನೆಯಡಿಯಲ್ಲಿ ಅಕ್ಕಿ, ತೊಗರಿ ಹಾಗೂ ಅಲ್ಪ ಪ್ರಮಾಣದಲ್ಲಿ ರಾಗಿ ಮತ್ತು ಜೋಳ ವಿತರಣೆಯಾಗುತ್ತಿದ್ದು, ಇದರ ಜೊತೆಗೆ ಹೆಸರು, ಉದ್ದು, ಕಡಲೆ ಹಾಗೇ ಬೇಡಿಕೆಯಿರುವ ಕರಾವಳಿ, ಮಲೆನಾಡು ಮುಂತಾದ ಕಡೆಗಳಲ್ಲಿ ಕುಸುಬಲಕ್ಕಿ, ತೆಂಗಿನ ಕಾಯಿ, ಕೊಬ್ಬರಿ ಇವುಗಳನ್ನೂ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವುದು.**

- **"ದ್ವಿದಳ ಧಾನ್ಯಗಳ ಮಹಾಮಂಡಳ"** ರಚನೆ, ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳನ್ನು (PACS) ಸೂಕ್ತ ರೀತಿಯಲ್ಲಿ ಖರೀದಿಗೆ ಬಳಕೆ, ರೈತರ ಮಟ್ಟದಲ್ಲೇ ಖರೀದಿಯ ಉತ್ಪನ್ನಗಳ ಗುಣಮಟ್ಟದ ದೃಢೀಕರಣವಾಗುವ ವ್ಯವಸ್ಥೆ ಜಾರಿಗೆ ತರುವುದು.

- **ರೈತರಿಂದ ಸರ್ಕಾರ ಖರೀದಿಸಿದ ಉತ್ಪನ್ನಗಳ ಮೌಲ್ಯವನ್ನು ಗರಿಷ್ಠ ಒಂದು ತಿಂಗಳೊಳಗೆ ಪಾವತಿಸತಕ್ಕದ್ದು. ವಿಳಂಬವಾದಲ್ಲಿ ನಂತರದ ಅವಧಿಗೆ ಬಡ್ಡಿ ಸಮೇತ ಪಾವತಿಸುವ ವ್ಯವಸ್ಥೆಯನ್ನು ಪರಿಗಣಿಸುವುದು.**

- ಬೀಜೋತ್ಪಾದಕ ರೈತರಿಗೆ ಡಾ. ಸ್ವಾಮಿನಾಥನ್ ರವರ ಶಿಫಾರಸ್ಸಿನಂತೆ **ಒಟ್ಟು ಉತ್ಪಾದನಾ ವೆಚ್ಚದ (Cost $C_2$) ಮೇಲೆ ಶೇ.50 ರಷ್ಟು ಲಾಭದಾಯಕ** ಧಾರಣೆ ನೀಡುವ ನಿಟ್ಟಿನಲ್ಲಿ **"ಕರ್ನಾಟಕ ಬೀಜ ನಿಗಮ"**ವನ್ನು ಸದೃಢಗೊಳಸುವುದು.

## 4. ಖರೀದಿ ಹೊಣೆಗಾರಿಕೆಗೆ ಶಾಸನ ಸ್ವರೂಪ

- **ಕರ್ನಾಟಕದ ಜನರ ಆಹಾರ ಭದ್ರತೆ ಮತ್ತು ವಿವಿಧ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಪ್ರಮಾಣದ ರಾಜ್ಯದ ರೈತರ ಉತ್ಪನ್ನವನ್ನು ಕಡ್ಡಾಯವಾಗಿ ಬೆಂಬಲ ಬೆಲೆಯಲ್ಲಿ ಖರೀದಿಸುವ "ಕರ್ನಾಟಕ ಕೃಷಿ ಉತ್ಪನ್ನ ಖರೀದಿ ಹೊಣೆಗಾರಿಕೆ ಶಾಸನ" (Karnataka Agriculture Produce Procurement Responsibility Act) ವನ್ನು ಜಾರಿಗೆ ತರುವುದು.**

- **ರೈತರ ಉತ್ಪನ್ನಗಳನ್ನು ಅಧಿಕವಾಗಿ ಖರೀದಿಸಲು 2013ರ ಕೇಂದ್ರದ ಆಹಾರ ಭದ್ರತಾ ಕಾಯಿದೆಯ** (The National Food Security Act) **ಯನ್ನು ಸೂಕ್ತ ರೀತಿಯಲ್ಲಿ ಬಳಸಲು ರಾಜ್ಯ ಆಹಾರ ಆಯೋಗದ ರಚನಾತ್ಮಕ ಸಹಯೋಗ ಪಡೆಯುವುದು.**

## 5. ಬೆಲೆ ಕೊರತೆ ಪಾವತಿ ಯೋಜನೆಯ ಅನುಷ್ಠಾನ

- ಈ ಯೋಜನೆಯನ್ನು ಎಣ್ಣೆಕಾಳುಗಳಗೆ ಇದೇ ಸಾಲಿನಲ್ಲಿ ಸೀಮಿತಗೊಳಸಲಾಗಿದೆ. ರಾಜ್ಯ ಸರ್ಕಾರ ಈರುಳ್ಳಿ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿರುತ್ತದೆ.

- **ರಾಜ್ಯದ ಪ್ರಮುಖ ಬೆಳೆಗಳಾದ ಮುಸುಕಿನಜೋಳ, ತೊಗರಿ, ಟೊಮೆಟೊ ಮತ್ತು ಈರುಳ್ಳಿ ಮುಂತಾದ ತೋಟಗಾರಿಕಾ ಬೆಳೆಗಳಗೆ ಬೆಲೆ ಕೊರತೆ ಪಾವತಿ ಯೋಜನೆ (Price Deficiency Payment Scheme - PDPS) ಯು ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ಕೇಂದ್ರದೊಡನೆ ಸಮರ್ಥವಾಗಿ ಪ್ರಸ್ತಾಪಿಸಿ, ಅನುಷ್ಠಾನಗೊಳಸುವುದು.**

## 6. ಅವಶ್ಯಕತೆಗನುಗುಣವಾದ ಬೆಲೆ ಸ್ಥಿರೀಕರಣ ನಿಧಿ ಸ್ಥಾಪನೆ

- **ರಾಜ್ಯ ಸರ್ಕಾರ ಕನಿಷ್ಠ 5000 ಕೋಟಿ ರೂಪಾಯಿ ಕರಗದ ಬೆಲೆ ಸ್ಥಿರೀಕರಣಕ್ಕಾಗಿ ಆವರ್ತ ನಿಧಿ (Price Stabilization Revolving Fund)ಯನ್ನು ಸ್ಥಾಪಿಸಿ, ಇದರ ಸಮರ್ಥ ನಿರ್ವಹಣೆಗಾಗಿ ಒಂದು ಪ್ರತ್ಯೇಕ ಸಚಿವಾಲಯವನ್ನು (Secretariate) ರಚಿಸುವುದು.**

## 7. ಗುಂಪು ಮಾರಾಟ ವ್ಯವಸ್ಥೆ ಸದೃಢಗೊಳಸುವುದು

- **"ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಮಗ್ರ ಗುಂಪು ಮಾರಾಟ ನೀತಿ"** ಯನ್ನು ರೂಪಿಸಿ, ಒಂದು ಪ್ರತ್ಯೇಕ **"ಗುಂಪು ಮಾರಾಟ ಸಾಮರ್ಥ್ಯಾಭಿವೃದ್ಧಿ ಸಂಸ್ಥೆ"**ಯನ್ನು ಸ್ಥಾಪಿಸುವುದು.

- ಇಸ್ರೇಲ್ **'ಕಿಬೂಟ್'** ಸಾಂಘಿಕ ಕೃಷಿಯ ಸಮಗ್ರ ಅಧ್ಯಯನ ಕೈಗೊಂಡು ಇದೇ ಮಾದರಿಯನ್ನು ಕರ್ನಾಟಕದಲ್ಲಿ ಸಮರ್ಥ ರೀತಿಯಲ್ಲಿ ಅನುಷ್ಠಾನಗೊಳಸುವುದು.

## 8. ಉತ್ಪಾದನಾ ವೆಚ್ಚ ಇಳಸುವುದು

- **ವಿವಿಧ ಕೃಷಿ ಯಂತ್ರಗಳನ್ನು ಹೊಂದಿರುವ ರೈತರನ್ನು ಪಟ್ಟಿ ಮಾಡಿ ಜೊತೆಗೆ ಕೃಷಿ ಯಂತ್ರಧಾರ ಕೇಂದ್ರಗಳ ಯಂತ್ರದ ಸೇವೆಯನ್ನು ಎಲ್ಲಾ ರೈತರಿಗೆ ಸಕಾಲದಲ್ಲಿ ಸಿಗುವಂತೆ ಮಾಡಲು ಖಾಸಗಿ ಕಾರುಗಳ 'ಓಲಾ' ದಂತೆ ಅಂತರ್ಜಾಲದ ಮೂಲಕ ಒಗ್ಗೂಡಿಸುವ (Online Aggregation) ವಿಸ್ತೃತ ವ್ಯವಸ್ಥೆಯನ್ನು ಏರ್ಪಡಿಸುವುದು.**

- ಜೊತೆಗೆ ಕೇರಳ ಮಾದರಿಯಲ್ಲಿ ಶ್ರಮದ ಬ್ಯಾಂಕ್ ಸ್ಥಾಪನೆ, ತಳಮಟ್ಟದ ಸಂಶೋಧನೆಗಳ ಸೂಕ್ತ ಬಳಕೆ ಹಾಗೂ ವೆಚ್ಚದ ಹೊರೆ ಇಳಸುವ ನಿಟ್ಟಿನಲ್ಲಿ **ಉದ್ಯೋಗ ಖಾತ್ರಿ ಯೋಜನೆಯ** ಫಲಾನುಭವ ರೈತರಿಗೆ ದೊರಕಿಸುವುದು.

## 9. ಕೃಷಿ ಭೂಮಿ ಸದ್ಬಳಕೆ, ಸಮಗ್ರ ಉತ್ಪಾದನಾ ನೀತಿ ಹಾಗೂ ಸೂಕ್ತ ಬೆಳೆ ಯೋಜನೆ

- ರಾಜ್ಯ ಮಟ್ಟದಲ್ಲಿ **ಸಮಗ್ರ ಕೃಷಿ ಉತ್ಪಾದನಾ ನೀತಿ** ಮತ್ತು ಆಯಾ ಜಿಲ್ಲೆಗಳಗೆ **ಸೂಕ್ತವಾದ ಬೆಳೆ ಯೋಜನೆ** ರೂಪಿಸುವ ಜವಾಬ್ದಾರಿಯನ್ನು **ರಾಜ್ಯದ ಯೋಜನಾ** ಮಂಡಳಗೆ ನೀಡಿ, ಮುಖ್ಯಮಂತ್ರಿಗಳ ನೇತೃತ್ವದಲ್ಲಿ **"ಕರ್ನಾಟಕ ಕೃಷಿ ಭೂಮಿ ಸದ್ಬಳಕೆಗೆ"** ಪ್ರತ್ಯೇಕ ಮಂಡಳಯನ್ನು ರಚಿಸುವುದು.

## 10. ಕೃಷಿ ಮಾರುಕಟ್ಟೆ ಇಲಾಖೆ ಪುನಃಶ್ಚೇತನ

- ರೈತರೆಡೆಗೆ ಮಾರುಕಟ್ಟೆ, ನಿಯಂತ್ರಿತ ಮಾರುಕಟ್ಟೆ ವ್ಯಾಪ್ತಿಯೊಳಗೇ ರೈತರ ಉತ್ಪನ್ನಗಳ ಮಾರಾಟ, ಅಡಮಾನ ಸಾಲದ ಸಮರ್ಪಕ ಬಳಕೆ ಹಾಗೂ ಮಾರುಕಟ್ಟೆ ಮಾಹಿತಿಯ ಸಮರ್ಥ ಪೂರೈಕೆಗೆ ಕರ್ನಾಟಕ ಕೃಷಿ ಮಾರಾಟ ಇಲಾಖೆಯನ್ನು ಸದೃಢಗೊಳಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಕೃಷಿ ಇಲಾಖೆ ಇವರ ವ್ಯಾಪ್ತಿಗೆ ತರುವುದು.

## 11. ಸಾವಯವ /ಸಿರಿಧಾನ್ಯ ಉತ್ಪನ್ನಳಗೆ ಸಮಗ್ರ ಬೆಲೆ ನೀತಿ ಮತ್ತು ಖರೀದಿ

- ಸಿರಿಧಾನ್ಯಗಳನ್ನು ಲಾಭದಾಯಕ ಬೆಂಬಲ ಬೆಲೆಯಲ್ಲಿ ಖರೀದಿಸಿ, ಹಾಪ್‌ಕಾಮ್ಸ್ ಮತ್ತಿತರ ವ್ಯವಸ್ಥೆಯ ಮೂಲಕ ವಿತರಣೆಯ ಜವಾಬ್ದಾರಿಯನ್ನು ಸರ್ಕಾರವೇ ಹೊರುವುದು.

## 12. ರೈತರ ಆದಾಯಕ್ಕೆ ವಿಮಾ ಯೋಜನೆ

- ಕೃಷಿ ಆದಾಯ ವಿಮೆ, ಗುಂಪು ಬೆಳೆ ವಿಮಾ ಯೋಜನೆ (Group Crop Insurance), ವ್ಯಕ್ತಿ ಮಟ್ಟದ ಕೃಷಿ ವಿಮಾ ಯೋಜನೆ, ಖಾಸಗಿ ಕಂಪನಿಗಳಗೂ ಅವಕಾಶ ಇತ್ಯಾದಿ ನವೀನ ವಿಮಾ ಪದ್ಧತಿಗಳನ್ನು ರೂಪಿಸಿ ರೈತರಿಗೆ ಹಲವು ವಿಧದ ವಿಮಾ ಅವಕಾಶಗಳನ್ನು ಒದಗಿಸಲು ರಾಜ್ಯ ಸರ್ಕಾರ ಮುಂದಾಗಬೇಕು.

## 13. ಕೇಂದ್ರದ ಮೇಲೆ ಸಮರ್ಥ ಒತ್ತಡ


- ಬೆಂಬಲ ಬೆಲೆ ನಿರ್ಧರಿಸುವಾಗ ಭೂಮಿಯ ಗೇಣಿ, ಇತ್ಯಾದಿಗಳನ್ನು ಸೇರಿಸಿ ಲೆಕ್ಕ ಹಾಕಿರುವ ಒಟ್ಟು ವೆಚ್ಚ (Cost $C_2$)ವನ್ನು ಪರಿಗಣಿಸಲು, ತೋಟಗಾರಿಕೆ ಬೆಳೆಗಳು ಮತ್ತು ಸಿರಿಧಾನ್ಯಗಳಗೆ ಬೆಂಬಲ ಬೆಲೆ ಘೋಷಿಸುವಂತೆ ಮಾಡಲು, ಬೆಂಬಲ ಬೆಲೆ ಮತ್ತು ಖರೀದಿಗೆ ಕಾನೂನು ಸ್ವರೂಪ ದೊರಕಿಸಲು ಕೇಂದ್ರದೊಡನೆ ಸೂಕ್ತ ರೀತಿಯಲ್ಲಿ ವ್ಯವಹರಿಸುವುದು.
- ರೈತರ ಮೇಲೆ ನೂತನ ಜಿ.ಎಸ್.ಟಿ ಹೊರೆ ಭಾರ ತಪ್ಪಿಸಲು **'ಕೇಂದ್ರದ ಸರಕು ಮತ್ತು ಸೇವಾ ಪರಿಷತ್'** ಮುಂದೆ ಕರ ಸುದಾರಣೆ ಪ್ರಸ್ತಾವನೆ ಸಲ್ಲಿಸುವುದು.

- ಈರುಳ್ಳಿ ಮತ್ತು ತೊಗರಿ ಬಗ್ಗೆ ಸಮಗ್ರ ರಾಷ್ಟ್ರೀಯ ನೀತಿಯನ್ನು ರೂಪಿಸಲು, ಅಡಕೆ ಮತ್ತು ಕಾಳುಮೆಣಸು ಬೆಳೆಗಳ ಕನಿಷ್ಠ ಆಮದು ಬೆಲೆ (Minimum Import Price) ನಿರ್ಧರಿಸಲು, ಅಡಕೆಗೆ ಒಂದು ಪ್ರತ್ಯೇಕ ಮಂಡಳ ರಚಿಸಲು ಮತ್ತು ಬೆಲೆ ಕೊರತೆ ಪಾವತಿ ಯೋಜನೆಯನ್ನು ಇತರ ಬೆಳೆಗಳಗೂ ವಿಸ್ತರಿಸಲು ಕೇಂದ್ರದ ಮೇಲೆ ಸೂಕ್ತ ರೀತಿಯ ಒತ್ತಡ ಹೇರುವುದು.

**ಯಂತ್ರ ಬಳಸಿ ವೆಚ್ಚ ಇಳಸುವುದು**



**ಸಾಲು ಚಕ್ರ ಕುಂಟೆ:**
ಈ ಯಂತ್ರವನ್ನು ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಕಡಲೆ ಮುಂತಾದ ಬೆಳೆಗಳಲ್ಲಿ ಉಪಯೋಗಿಸಿದರೆ ಶೇ.25 ರಷ್ಟು ಮಾನವ ಶ್ರಮದ ಬಾಪ್ತಿನ ವೆಚ್ಚ ಉಳಸಬಹುದು



**ಟ್ರ್ಯಾಕ್ಟರ್ ಚಾಲಿತ ಕಾಲುವೆ ತೆಗೆಯುವ ಉಪಕರಣ:**
ಈ ಉಪಕರಣವನ್ನು ಬಾಳೆ, ದಾಳಿಂಬೆ, ಅಡಕೆ, ಶುಂಠಿ, ಅರಿಶಿಣ ಮುಂತಾದ ಬೆಳೆಗಳಲ್ಲಿ ಉಪಯೋಗಿಸಿದರೆ ಶೇ.40 ರಷ್ಟು ಮಾನವ ಶ್ರಮದ ಬಾಪ್ತಿನ ವೆಚ್ಚ ಉಳಸಬಹುದು

## ಪಟ್ಟಿ–2: ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಆವಕ ಮತ್ತು ಬೆಲೆಗಳ ಈ ಸಾಲಿನ ಪರಿಸ್ಥಿತಿಯ ಸಾರಾಂಶ

| ಕ್ರ.ಸಂ. | ಬೆಳೆಗಳು | ಕಳೆದ ಸಾಲಿಗೆ ಹೋಲಿಸಿದರೆ ಈ ಸಾಲಿನ ಅಕ್ಟೋಬರ್ ವರೆಗೆ ಆವಕ ಮತ್ತು ಬೆಲೆಗಳ ಏರಿಕೆ / ಇಳಿಕೆ(ಶೇ.) | | ಆವಕ ಅಧಿಕವಾಗಿರುವ ಮಾಸಗಳು | ಮುಂಬರುವ ದಿನಗಳ ಬೆಲೆ ಮುನ್ನೆಚ್ಚರಿಕೆ |
|---|---|---|---|---|---|
| | | ಆವಕ | ಬೆಲೆ | | |
| 1 | ಭತ್ತ | –10 | –4 | ಜನವರಿ, ಮೇ, ಜೂನ್, ನವೆಂಬರ್, ಡಿಸೆಂಬರ್ | ರೂ. 2160 ರ ಆಸುಪಾಸಿನಲ್ಲಿರುತ್ತದೆ, ಈ ಮುನ್ಸೂಚನಾ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚಕ್ಕಿಂತ ಮೇಲಿರುವುದು ಮಾತ್ರವಲ್ಲದೇ ಕನಿಷ್ಠ ಬೆಂಬಲಗಿಂತ ಕೂಡಾ ಅಧಿಕವಾಗಿರುತ್ತದೆ. |
| 2 | ರಾಗಿ | 175 | –20 | ಜನವರಿ, ಜೂನ್, ನವೆಂಬರ್, ಡಿಸೆಂಬರ್ | ರೂ. 2500 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗಲಿದೆ. ಈ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚಕ್ಕಿಂತ ಸ್ವಲ್ಪ ಏರಿಕೆಯಿದ್ದರೂ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 3 | ಹೈಬ್ರಿಡ್ ಜೋಳ | 194 | –13 | ಜನವರಿ, ಫೆಬ್ರವರಿ, ಮಾರ್ಚ, ಏಪ್ರಿಲ್, ಮೇ | ರೂ. 1500 ರ ಆಸುಪಾಸಿನಲ್ಲಿರುತ್ತದೆ. ಈ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| | ಬಿಳಿ ಜೋಳ | 26 | –12 | ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ, ಅಕ್ಟೋಬರ್ | ರೂ. 2000 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಕುಂಠಿತವಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ವೆಚ್ಚಕ್ಕಿಂತ ಸ್ವಲ್ಪ ಕಡಿಮೆಯಿದ್ದು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 4 | ಮುಸುಕಿನ ಜೋಳ | 46 | –18 | ಜನವರಿ, ಫೆಬ್ರವರಿ, ಮಾರ್ಚ್, ನವೆಂಬರ್, ಡಿಸೆಂಬರ್ | ರೂ. 1400 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಏರಿಕೆಯಿದ್ದರೂ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 5 | ಸಜ್ಜೆ | –4 | –21 | ಜನವರಿ, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ.1450 ರ ಆಸುಪಾಸಿನಲ್ಲಿರುತ್ತದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ವೆಚ್ಚಕ್ಕಿಂತ ಸಾಕಷ್ಟು ಕಡಿಮೆಯಿದ್ದು, ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 6 | ತೊಗರಿ | –13 | –6 | ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್, ಡಿಸೆಂಬರ್ | ರೂ. 3300 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಕುಂಠಿತವಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ವೆಚ್ಚ ಹಾಗೂ ಕನಿಷ್ಠ ಬೆಂಬಲ ಬೆಲೆಗಿಂತ ಕೂಡಾ ಕಡಿಮೆಯಿರುತ್ತದೆ. |
| 7 | ಹೆಸರು | 21 | 2 | ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ | ರೂ. 4400 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಕುಂಠಿತವಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚಕ್ಕಿಂತ ಸ್ವಲ್ಪ ಮೇಲಿದ್ದರೂ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 8 | ಉದ್ದು | –18 | –27 | ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 4000 ರ ಆಸುಪಾಸಿನಲ್ಲಿದ್ದು, ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚಕ್ಕಿಂತ ಕಡಿಮೆಯಿದ್ದು ಕನಿಷ್ಠ ಬೆಂಬಲ ಬೆಲೆಗಿಂತಲೂ ಕೂಡಾ ಕಡಿಮೆಯಿರುತ್ತದೆ. |
| 9 | ಕಡಲೆ | 81 | –34 | ಜನವರಿ, ಫೆಬ್ರವರಿ, ಮಾರ್ಚ, ಏಪ್ರಿಲ್ | ರೂ. 3900 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಕುಂಠಿತವಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಿರುತ್ತದೆ. |
| 10 | ಶೇಂಗಾ | 11 | –16 | ಫೆಬ್ರವರಿ, ಮಾರ್ಚ, ಏಪ್ರಿಲ್, ಅಕ್ಟೋಬರ್ | ರೂ. 3800 ರ ಆಸುಪಾಸಿನಲ್ಲಿದ್ದು, ನಂತರ ಸ್ವಲ್ಪ ಇಳಿಕೆಯಾಗುವ ಸಾಧ್ಯತೆ ಇರುವುದು. ಈ ಮುನ್ಸೂಚನೆ ಬೆಲೆ ರೈತ ಭರಿಸುವ ವೆಚ್ಚಕ್ಕಿಂತ ಕಡಿಮೆಯಿದ್ದು, ಕನಿಷ್ಠ ಬೆಂಬಲ ಬೆಲೆಗಿಂತ ಕೂಡಾ ಕಡಿಮೆಯಿರುತ್ತದೆ. |
| 11 | ಸೋಯಾ ಅವರೆ | –11 | 22 | ಜನವರಿ, ಮಾರ್ಚ, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 2900 ರ ಆಸುಪಾಸಿನಲ್ಲಿದ್ದು ನಂತರ ಇಳಿಯುವ ಸಾಧ್ಯತೆ ಇರುವುದು. ಈ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆಗಿಂತ ಕೆಳಮಟ್ಟದಲ್ಲಿದೆ. |
| 12 | ಸೂರ್ಯಕಾಂತಿ | 23 | 13 | ಜನವರಿ, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 3600 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕರಯಾಗುವ ಸಾಧ್ಯತೆ ಇರುತ್ತದೆ. ಈ ಮುನ್ಸೂಚನೆ ಬೆಲೆ ಕನಿಷ್ಠ ಬೆಂಬಲ ಬೆಲೆಗಿಂತ ಮಾತ್ರವಲ್ಲದೇ ಉತ್ಪಾದನಾ ವೆಚ್ಚಕ್ಕಿಂತಲೂ ಕೆಳಮಟ್ಟದಲ್ಲಿರುವುದು. |

*ಮುಂದುವರೆದಿದೆ...*

*ಹಿಂದಿನ ಪುಟದಿಂದ ಮುಂದುವರೆದಿದೆ...*

| | | | | | |
|---|---|---|---|---|---|
| 13 | **ಹತ್ತಿ** | 11 | –2 | ಜನವರಿ, ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 5900 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆಗಿಂತ ಮೇಲೆಯೇ ಇರುತ್ತದೆ |
| 14 | **ಒಣ ಮೆಣಸಿನಕಾಯಿ** | –13 | 21 | ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್ | ರೂ. 7500 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗಿ, ಇದೇ ಪ್ರವೃತ್ತಿ ಮುಂದುವರೆಯುವ ಸಾಧ್ಯತೆ ಇರುತ್ತದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನ ವೆಚ್ಚಕ್ಕಿಂತ ಹೆಚ್ಚೆಗೆ ಇರುತ್ತದೆ. |
| 15 | **ಟೊಮೆಟೊ** | 76 | –64 | ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ | ರೂ. 700 ರ ಆಸುಪಾಸಿನಲ್ಲಿದ್ದು, ನಂತರ ಇಳಿಯುತ್ತಾ ಹೋಗುವ ಸಾಧ್ಯತೆ ಇರುತ್ತದೆ. ಈ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿದ್ದು, ಇದೇ ಪ್ರವೃತ್ತಿ ಮುಂದುವರೆಯುವ ಸಾಧ್ಯತೆ ಇರುತ್ತದೆ. |
| 16 | **ಈರುಳ್ಳಿ** | 32 | 9 | ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 1100 ರ ಆಸುಪಾಸಿನಲ್ಲಿದ್ದು ಅದೇ ರೀತಿ ಮುಂದುವರೆಯುವ ಸಾಧ್ಯತೆ ಇದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಸ್ವಲ್ಪಮಟ್ಟಿಗೆ ಅಧಿಕವಾಗಿರುತ್ತದೆ. |
| 17 | **ಆಲೂಗಡ್ಡೆ** | –4 | 53 | ಮೇ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ಡಿಸೆಂಬರ್ | ರೂ. 1500 ರ ಆಸುಪಾಸಿನಲ್ಲಿದ್ದು, ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗುವ ಸಾಧ್ಯತೆಯಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕೆ ಹತ್ತಿರವಿರುತ್ತದೆ. |
| 18 | **ಬಾಳೆ** | 37 | –6 | ಮಾರ್ಚ್,ಏಪ್ರಿಲ್,ಮೇ | ರೂ. 3300 ರ ಆಸುಪಾಸಿನಲ್ಲಿದ್ದು, ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗಲಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. |
| 19 | **ದ್ರಾಕ್ಷಿ** | –13 | 41 | ಜನವರಿ, ಫೆಬ್ರವರಿ, ಮಾರ್ಚ, ಏಪ್ರಿಲ್ | **ಬಿಳಿ ದ್ರಾಕ್ಷಿ :** ರೂ. 3700 ರ ಆಸುಪಾಸಿನಲ್ಲಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗುವುದು. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ.<br>**ಕಪ್ಪು ದ್ರಾಕ್ಷಿ :** ರೂ. 2600 ರ ಆಸುಪಾಸಿನಲ್ಲಿದ್ದು ಸ್ವಲ್ಪ ಏರಿಕೆಯಾಗುವ ಸಾಧ್ಯತೆಯಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ, |
| 20 | **ದಾಳಿಂಬೆ** | –5 | 37 | ಮೇ, ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ | ರೂ. 8000 ರ ಆಸುಪಾಸಿನಲ್ಲಿದ್ದು ಸ್ವಲ್ಪ ಮಟ್ಟಿಗೆ ಚೇತರಿಕೆ ಕಾಣಬಹುದು. ಈ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. |
| 21 | **ಮಾವು** | –32 | –25 | ಮಾರ್ಚ,ಏಪ್ರಿಲ್,ಮೇ,ಆಗಸ್ಟ್ | ಲಭ್ಯವಿಲ್ಲ |
| 22 | **ತೆಂಗು** | –10 | 41 | ಜುಲೈ,ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ | ರೂ. 14500 ರ ಆಸುಪಾಸಿನಲ್ಲಿದ್ದು, ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗುವ ಸಾಧ್ಯತೆಯಿರುತ್ತದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. |
| | **ಕೊಬ್ಬರಿ** | –5 | 67 | ಜನವರಿ, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ | ರೂ. 13500 ರ ಆಸುಪಾಸಿನಲ್ಲಿದ್ದು, ಅದೇ ಮುಂದುವರೆಯುವ ಸಾಧ್ಯತೆಯಿರುತ್ತದೆ. ಈ ಮುನ್ಸೂಚನಾ ಬೆಲೆ ರೈತ ಭರಿಸುವ ಉತ್ಪಾದನೆ ವೆಚ್ಚಕ್ಕಿಂತ ಮೇಲಿರುವುದು ಮಾತ್ರವಲ್ಲದೇ ಕನಿಷ್ಠ ಬೆಂಬಲಗಿಂತ ಕೂಡಾ ಅಧಿಕವಾಗಿರುತ್ತದೆ. |
| 23 | **ಕೆಂಪಡಿಕೆ** | 8 | –8 | ಜನವರಿ, ಫೆಬ್ರವರಿ, ಮಾರ್ಚ್, ಡಿಸೆಂಬರ್ | ರೂ. 35000 ರ ಆಸುಪಾಸಿನಲ್ಲಿದ್ದು, ಅದೇ ರೀತಿ ಮೂಂದುವರೆಯುವ ಸೂಚನೆಯಿದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚಾಗಿರುತ್ತದೆ. |
| | **ಬಿಳಿಅಡಿಕೆ** | –3 | 5 | ಜನವರಿ, ಮೇ | ರೂ .27000 ರ ಆಸುಪಾಸಿನಲ್ಲಿದ್ದು, ಪ್ರಾರಂಭದಲ್ಲಿ ಕಡಿಮೆಯಿದ್ದು ನಂತರ ಸ್ವಲ್ಪ ಮಟ್ಟಿಗೆ ಏರಿಕೆಯಾಗುವ ಸಾಧ್ಯತೆ ಇರುತ್ತದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚಾಗಿರುತ್ತದೆ. |
| 24 | **ಶುಂಠಿ** | –26 | 18 | ಜನವರಿ, ಫೆಬ್ರವರಿ, ಮಾರ್ಚ್,ಏಪ್ರಿಲ್, ಮೇ, ಅಕ್ಟೋಬರ್ | ರೂ. 10000 ರ ಆಸುಪಾಸಿನಲ್ಲಿದ್ದು, ನಂತರ ಏರಿಕೆಯಾಗುವ ಸಾಧ್ಯತೆಯಿರುತ್ತದೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚಾಗಿರುತ್ತದೆ. |
| 26 | **ಅರಿಶಿಣ** | 16 | 12 | ಫೆಬ್ರವರಿ, ಮಾರ್ಚ್, ಏಪ್ರಿಲ್, ಜೂನ್, ಅಕ್ಟೋಬರ್ | ರೂ. 7800ರ ಆಸುಪಾಸಿನಲ್ಲಿದ್ದು ಸ್ವಲ್ಪ ಚೇತರಿಸಿಕೊಳ್ಳುವ ಲಕ್ಷಣಗಳಿವೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚಾಗಿರುತ್ತದೆ. |
| 26 | **ಕರಿ ಮೆಣಸು** | 103 | –33 | ಮಾರ್ಚ್, ಏಪ್ರಿಲ್, ಮೇ, ಜೂನ್ | ರೂ. 31000 ರ ಆಸುಪಾಸಿನಲ್ಲಿದ್ದು, ಸ್ವಲ್ಪ ಇಳಿಕೆಯಾಗುವ ಸೂಚನೆಗಳಿವೆ. ಈ ಮುನ್ಸೂಚನೆ ಬೆಲೆ ರೈತ ಭರಿಸುವ ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಾಗಿರುತ್ತದೆ. |

# ಕರ್ನಾಟಕ ಕೃಷಿ ಬೆಲೆ ಆಯೋಗದ ಕಾರ್ಯಜಾಲ

**ಅಧ್ಯಕ್ಷರು**

**ರೈತ ಪ್ರತಿನಿಧಿ ಸದಸ್ಯರು**
(2 ಸಂಖ್ಯೆ)

**ಸದಸ್ಯ ಕಾರ್ಯದರ್ಶಿಗಳು**
ಕೃಷಿ ನಿರ್ದೇಶಕರು, ಕೃಷಿ ಇಲಾಖೆ

**ಅಧಿಕಾರಿ ಸದಸ್ಯರು**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕೃಷಿ ಇಲಾಖೆ ಮತ್ತು ಸಹಕಾರ ಇಲಾಖೆ

**ಖಾಯಂ ಆಹ್ವಾನಿತರು ಹಾಗೂ ಆಹ್ವಾನಿತರು**
ಆಯುಕ್ತರು, ಕೃಷಿ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು,
ನಿರ್ದೇಶಕರು, ಕೃಷಿ ಮಾರುಕಟ್ಟೆ, ತೋಟಗಾರಿಕೆ ಇಲಾಖೆ ಹಾಗೂ ಸಂದರ್ಭನುಸಾರ ಇತರರು

**ಆಯೋಗದ ತಾಂತ್ರಿಕ ತಂಡ**
ತಾಂತ್ರಿಕ ಸಲಹೆಗಾರರು ಮತ್ತು
ತಾಂತ್ರಿಕ ಸಹಾಯಕರು

**ಆಯೋಗದ ಅಧಿಕಾರಿ ತಂಡ**
ಉಪ ಕೃಷಿ ನಿರ್ದೇಶಕರು,
ಸಹಾಯಕ ಕೃಷಿ ನಿರ್ದೇಶಕರು,
ಪ್ರಥಮ ದರ್ಜೆ ಸಹಾಯಕರು,
ಬೆರಳಚ್ಚುಗಾರರು

**ಅಧ್ಯಕ್ಷರಿಗಾಗಿ ನೀಡಿರುವ ತಂಡ**
ಆಪ್ತಕಾರ್ಯದರ್ಶಿಗಳು,
ಸಹಾಯಕರು,
ವಾಹನ ಚಾಲಕರು,
ಡಿ ಗ್ರೂಪ್ ನೌಕರರು

**ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಜಾಲ**
ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳಲ್ಲಿ "ಬೆಳೆ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕ"
(Cost of Cultivation & Market Intelligence Cell - COCMIC)

**ಕೃ.ವಿ.ವಿ, ಬೆಂಗಳೂರು**
ಮುಖ್ಯ ಹಾಗೂ ಸಹ ಅಧ್ಯಯನಕಾರರು ಮತ್ತು ಸಂಶೋಧನಾ ಸಹವರ್ತಿಗಳು

**ಕೃ.&ತೋ.ವಿ.ವಿ.ಶಿವಮೊಗ್ಗ**
ಮುಖ್ಯ ಹಾಗೂ ಸಹ ಅಧ್ಯಯನಕಾರರು ಮತ್ತು ಸಂಶೋಧನಾ ಸಹವರ್ತಿಗಳು

**ಕೃ.ವಿ.ವಿ, ಧಾರವಾಡ**
ಮುಖ್ಯ ಹಾಗೂ ಸಹ ಅಧ್ಯಯನಕಾರರು ಮತ್ತು ಸಂಶೋಧನಾ ಸಹವರ್ತಿಗಳು

**ತೋ.ವಿ.ವಿ. ಬಾಗಲಕೋಟೆ**
ಮುಖ್ಯ ಹಾಗೂ ಸಹ ಅಧ್ಯಯನಕಾರರು ಮತ್ತು ಸಂಶೋಧನಾ ಸಹವರ್ತಿಗಳು

**ಕೃ.ವಿ.ವಿ, ರಾಯಚೂರು**
ಮುಖ್ಯ ಹಾಗೂ ಸಹ ಅಧ್ಯಯನಕಾರರು ಮತ್ತು ಸಂಶೋಧನಾ ಸಹವರ್ತಿಗಳು

**ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಗೆ ಭಾಗೀದಾರರಾಗಿರುವ ಕೃಷಿ ವಿಜ್ಞಾನ ಕೇಂದ್ರಗಳು/ಕೃ.ವಿ. ಘಟಕ**
ಕೃಷಿ ವಿಜ್ಞಾನ ಕೇಂದ್ರಗಳು, ತುಮಕೂರು, ಚಿತ್ರದುರ್ಗ, ಕೋಲಾರ, ಮಂಗಳೂರು, ಹಾವೇರಿ, ರಾಯಚೂರು, ಕಲಬುರಗಿ,
ಕೃಷಿ ವಿಸ್ತರಣಾ ಘಟಕ, ಬೆಳಗಾವಿ

**ಸಂಶೋಧನೆಗೆ ಸಹಕರಿಸುತ್ತಿರುವ ಇತರೆ ಸಂಸ್ಥೆಗಳು**
ಭಾರತೀಯ ತೋಟಗಾರಿಕಾ ವ್ಯವಸ್ಥಾಪಕ ಸಂಸ್ಥೆ (IIPM); ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂ ಬಳಕೆ ನಿಯೋಜನೆ ಸಂಸ್ಥೆ (NBSS&LUP); ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ISEC), (ಬೆಂಗಳೂರು); ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, (ಬೀದರ್); ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ (MIT) (ಮೈಸೂರು); ಐಬಿಎಂ ಇಂಡಿಯಾ ಪ್ರೈವೇಟ್ ಲಿಮಿಟೆಡ್ (IBM), (ಬೆಂಗಳೂರು); ಅನ್ವಿತಾ ಸಂಸ್ಥೆ ಮತ್ತು ಡೇಟಾ ವರ್ಕ್ಸ್ (Dataworx) ಸಂಸ್ಥೆ, (ಬೆಂಗಳೂರು).

ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಬೆಲೆ ಆಯೋಗ

## (Karnataka Agriculture Price Commission)

(ಆದೇಶ ಸಂಖ್ಯೆ: ಕೃಇ61ಕೃಉಇ2013, ಬೆಂಗಳೂರು, ದಿ: 31/01/2014 ಮತ್ತು
ಆದೇಶ ಸಂಖ್ಯೆ: ಕೃಇ57ಕೃಇಕ2017, ಬೆಂಗಳೂರು, ದಿ: 14/07/2017)

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು 2013-14 ನೇ ಸಾಲಿನ ಆಯವ್ಯಯ ಭಾಷಣದ ಪ್ರಸ್ತಾಪದನ್ವಯ, ಸರ್ಕಾರದ ಆದೇಶ ಸಂಖ್ಯೆ: ಕೃಇ61ಕೃಉಇ2013, ಬೆಂಗಳೂರು, ದಿ:31/01/2014 ರಂತೆ 10 ಷರತ್ತು ಮತ್ತು ನಿಬಂಧನೆ, 10 ಕರ್ತವ್ಯ ಹಾಗೂ ರಚನೆಗಳಂತೆ ಓರ್ವ ಅಧ್ಯಕ್ಷರು ಮತ್ತು ಐವರು ಸದಸ್ಯರಿರುವ ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ರಚಿಸಲಾಯಿತು. ಮುಂದುವರೆದು, ಸರ್ಕಾರ ಆದೇಶ ಸಂಖ್ಯೆ: ಕೃಇ 57 ಕೃಇಕ 2017, ಬೆಂಗಳೂರು, ದಿನಾಂಕ: 14.07.2017ರ ಅನ್ವಯ ಕೃಷಿ ಬೆಲೆ ಆಯೋಗವನ್ನು ಮತ್ತೊಂದು ಅವಧಿಗೆ ಮುಂದುವರೆಸಲಾಗಿದೆ.

### ದೃಷ್ಟಿಕೋನ:

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಠ ಪಾಲು ಖಚಿತಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ಕರ್ನಾಟಕ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

### ಧ್ಯೇಯೊದ್ದೇಶಗಳು:

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯಪ್ರವೇಶ', ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (Collective Bargaining Power) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ..


**ಕೃಷಿ ಆಯುಕ್ತರ ಕಾರ್ಯಾಲಯ ಆವರಣ**
**ಶೇಷಾದ್ರಿ ರಸ್ತೆ, ಬೆಂಗಳೂರು – 560 001**
**ದೂರವಾಣಿ: 080-22115496**
**ಇ-ಮೇಲ್: agripricecommission@gmail.com**
**ಜಾಲತಾಣ: www.kapricom.org**


Design by dataworx: www.dataworx.co.in